ಅಮರ ಚಿತ್ರ ಕಥೆ

ಸಂ. 25 ರೂ. 1.50

ಪೃಥ್ವೀರಾಜ ಚೌಹಾಣ

ಕನ್ನಡ ನಿರೂಪಣೆ: ಡಾ|| ಶಿವರಾಮ ಕಾರಂತ



ಕನೌಜದ ರಾಜ ಹರ್ಷನು ಮರಣ ಹೊಂದಿದ ಮೇಲೆ ಉತ್ತರ ಭಾರತದಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳು ತಲೆಯೆತ್ತಿದವು. ಅಲ್ಲದೆ ಈ ಹೊಸ ರಾಜ್ಯಗಳ ಅರಸರಲ್ಲಿ ತೀವ್ರ ಅಂತಃಕಲಹ ಪ್ರಾರಂಭವಾಯಿತು.

ವಿದೇಶೀಯ ಆಕ್ರಮಣಕಾರರು ಇದೇ ಸಂಧಿಯನ್ನು ಸಾಧಿಸಿ ಭಾರತದ ಮೇಲೆ ದಾಳಿ ಮಾಡಿದರು. ಹನ್ನೆರಡನೆಯ ಶತಮಾನದಲ್ಲಿ ಶಹಾಬುದ್ದೀನ ಘೋರಿ ಎಂಬ ಅಫಘಾನನು ಲಾಹೋರವನ್ನು ವಶಪಡಿಸಿಕೊಂಡು ದಿಲ್ಲಿಯ ಮೇಲೆ ಮುನ್ನುಗ್ಗಿದನು. ಆಗ ಅಲ್ಲಿಯ ಅರಸನಾಗಿದ್ದ ಪೃಥ್ವೀರಾಜ ಚವ್ಹಾಣನು ಅವನನ್ನು ತರಾಯಿಾ ಎಂಬ ಸ್ಥಳದಲ್ಲಿ ಸೋಲಿಸಿದನು.


ಮರುವರ್ಷ ಘೋರಿಯು ಭಾರತಕ್ಕೆ ಮರಳಿ ಬಂದು ದಿಲ್ಲಿಯ ಮೇಲೆ ಪುನಃ ದಾಳಿ ಮಾಡಿದನು. ಈ ಬಾರಿ, ಪೃಥ್ವೀರಾಜನ ಸೈನ್ಯವು ಭಾರೀ ಪರಾಜಯವನ್ನು ಅನುಭವಿಸಿತು. ಈ ಯುದ್ಧವು ಉತ್ತರ ಭಾರತದಲ್ಲಿ ಹಿಂದು ಸಾಮ್ರಾಜ್ಯವನ್ನು ಕೊನೆಗಾಣಿಸಿದ್ದಲ್ಲದೆ ಮುಸ್ಲಿಂ ರಾಜ್ಯವನ್ನು ಭದ್ರವಾಗಿ ಸ್ಥಾಪಿಸಿತು.

ಪೃಥ್ವೀರಾಜ ಚವ್ಹಾಣನು ಜನಪ್ರಿಯ ರಾಜನೂ ವೀರ ಯೋಧನೂ ಆಗಿದ್ದನು. ಆತನು ಶೌರ್ಯ ಮತ್ತು ಔದಾರ್ಯಕ್ಕಾಗಿ ಪ್ರಸಿದ್ಧನಾಗಿದ್ದನು. ಸೋಲು ಮತ್ತು ಸಾವನ್ನು ಅವನು ಹೊಂದಿದರೂ, ಆತನ ಹೆಸರು ಅಜರಾಮರವಾಗಿದೆ. ಆತನ ಬಗ್ಗೆ ಅನೇಕ ಆಖ್ಯಾಯಿಕೆಗಳು ಹರಡಿಕೊಂಡಿವೆ. ಮುಂದಿನ ಪುಟಗಳಲ್ಲಿಯ ಆತನ ವೃತ್ತಾಂತವು ಈ ಆಖ್ಯಾಯಿಕೆಗಳ ಮೇಲೆ ಆಧಾರಿತವಾಗಿದೆ.

Printed by H. K. Nasta at IBH Printers, Marol Naka, Mathuradas Vissanji Road, Andheri East, Bombay 69. Published by IBH Prakashana, Gandhinagar, Bangalore 9.

Editor: Anant Pai. Retold by: Yagya Sharma. Artwork : K. P. Shankar.

ಪೃಥ್ವೀರಾಜ ಚವ್ಹಾಣ



ಭಾರತಕ್ಕೆ ಮೊಗಲರು ಬರುವ ಮುಂಚೆ ದಿಲ್ಲಿಯನ್ನು ಪೃಥ್ವೀರಾಜ ಚವ್ಹಾಣ ಎಂಬ ಒಬ್ಬ ವೀರ ಅರಸು ಆಳುತ್ತಿದ್ದ.


ಅದೇ ವೇಳೆಗೆ ದಿಲ್ಲಿಗಿಂತ ದೊಡ್ಡ ರಾಜ್ಯ-ವಾದ ಕನೋಜವನ್ನು ಜಯಚಂದನೆಂಬ ದೊರೆ ಆಳುತ್ತಿದ್ದ.
ನಾನು ಭಾರತದ ಚಕ್ರವರ್ತಿಯಾಗಿದ್ದರೆ ಎಷ್ಟು ಚೆನ್ನಾಗಿರು-ತ್ತಿತ್ತು ?
ಮಹಾರಾಜ, ನೀವು ಸಮ್ರಾಟರಾಗಲು ಒಂದು ರಾಜಸೂಯ ಯಾಗವನ್ನು ಮಾಡಬಹುದಲ್ಲ!
ಸರಿಯಾದ ಯೋಚನೆ. ಆಗ ನನ್ನನ್ನು ಇದಿರಿಸುವವರನ್ನು ನಾಶಪಡಿಸಿದರಾಯಿತು.
ದೇಶದ ಎಲ್ಲ ದೊರೆಗಳಿಗೂ, ನನ್ನನ್ನು ತಮ್ಮ ಚಕ್ರವರ್ತಿಯೆಂದು ತಿಳಿದು ರಾಜಸೂಯ ಯಜ್ಞದಲ್ಲಿ ಭಾಗ ವಹಿಸುವಂತೆ ತಿಳಿಸು.
ತಮ್ಮ ಅಪ್ಪಣೆ, ಮಹಾರಾಜ!


ಜಯಚಂದ ಚಕ್ರವರ್ತಿಯೆಂದು ಒಪ್ಪಲಾರ-ದವರು ಅವನ ಮಹಾಬಲವನ್ನು ಇದಿರಿಸ-ಬೇಕಾಯಿತು.
ಕಟ್ಟಕೊನೆಗೆ, ಕೇವಲ ಒಬ್ಬನನ್ನು ಬಿಟ್ಟು ಉಳಿದೆಲ್ಲ ಅರಸರೂ ಅವನನ್ನು ಸಮ್ರಾಟನನ್ನಾಗಿ ಒಪ್ಪಿದರು.
ಎಲ್ಲರೂ ನನ್ನನ್ನು ಚಕ್ರ-ವರ್ತಿಯನ್ನಾಗಿ ಒಪ್ಪಿದ್ದು ಸಂತೋಷವೇ... ಪೃಥ್ವೀ-ರಾಜನ ಸಂಗತಿಯೇನು?
ಅಲ್ಲಿಗೆ ಹೋದ ದೂತ ಇನ್ನೂ ಬಂದಿಲ್ಲ, ಮಹಾರಾಜ.
ಜಯಚಂದನ ದೂತನನ್ನು ಕಂಡ ಪೃಥ್ವೀ-ರಾಜನಿಗೆ ಕೋಪವೇ ಬಂತು. ಆತನ ಗುರು ಆ ದೂತನನ್ನು ಮಾತನಾಡಿಸಿದ.
ಹೋಗಿ ನಿನ್ನ ದೊರೆಗೆ ಹೇಳು, ದಿಲ್ಲಿಗೆ ಪೃಥ್ವೀರಾಜ ಏಕೈಕ ದೊರೆ ಎಂದು.


ಪೃಥ್ವೀರಾಜನಿಗೆ ಈ ಸಂಗತಿ ಕೇಳಿಯೇ ತೀರ ತಳಮಳವಾಯಿತು. ಆತ ತನ್ನ ಕೋಪವನ್ನು ಮರೆಯಲಿಕ್ಕೆಂದು ಬೇಟೆಗೆ ಹೊರಟ.


ಅಷ್ಟರಲ್ಲಿ ಜಯಚಂದನ ದೂತ ಕನೋಜವನ್ನು ಸೇರಿದ.
ಮಹಾರಾಜ, ಪೃಥ್ವೀರಾಜ ತಮ್ಮ ಸಾರ್ವಭೌಮತ್ವವನ್ನು ಒಪ್ಪಲಿಲ್ಲ.
ದಿಲ್ಲಿಯ ಮೇಲೆ ದಂಡೆತ್ತಿ ಹೋಗಿ ಅವನನ್ನು ಸದೆ-ಬಡಿಯುತ್ತೇನೆ.
ಆದರೆ ದೊರೆಯೇ, ಯಜ್ಞದ ದಿನ ಸಮೀಪಿಸಿರುತ್ತದೆ. ದಿಲ್ಲಿಯ ಮೇಲೆ ಏರಿ ಹೋಗಲು ಸಮಯವಿಲ್ಲ.
ಅದೂ ಸರಿ, ಯಜ್ಞ ಮುಗಿ-ಯುವ ತನಕ ಕಾದಿರುವೆ. ಈ ಯಜ್ಞದ ಜತೆಯಲ್ಲೇ ನನ್ನ ಮಗಳು ಸಂಯೋಗಿತೆ-ಯ ಸ್ವಯಂವರವನ್ನೂ ಜರುಗಿಸುತ್ತೇನೆ.
ಸಂಯೋಗಿತೆ ಆಮಂತ್ರಿತ ಅರಸುಗಳಲ್ಲಿ ತನಗೆ ಇಚ್ಛೆಯಾದ ವರನನ್ನು ಆರಿಸಲಿ.
ಸ್ವಯಂವರ ಕಾಲ-ದಲ್ಲಿ ಪೃಥ್ವೀರಾಜನಿಗೆ ಅಪಮಾನ ಮಾಡಲು ಒಂದು ಯೋಗ್ಯ ಉಪಾಯ ನನಗೆ ಸೂಚಿಸುತ್ತಿದೆ.


ಆದ್ದರೆ ಮಾತ್ರ - ಪೃಥ್ವೀರಾಜನ ಪರಾಕ್ರಮಗಳ ಕತೆಗಳನ್ನು ಕೇಳಿದ್ದ ಸಂಯೋಗಿತೆ ಅವನನ್ನು ಕಾಣದೆಯೂ ಅವನಲ್ಲೇ ಅನುರಕ್ತಳಾಗಿದ್ದಳು.
ಸ್ವಯಂವರ ನಡೆಯುದೇ ಹೋಗಲಿ!
ಆದರೆ ನಿಮ್ಮ ತಂದೆ ಅದಕ್ಕೆ ಅನೇಕ ರಾಜರನ್ನು ಆಮಂತ್ರಿಸಿಯೂ ಆಯಿತು.
ಅವರಾರನ್ನೂ ನಾನು ಆರಿಸ
ವವಳಲ್ಲ. ನಾನು ಪೃಥ್ವೀರಾ
ನನ್ನು ಆರಿಸಿಯಾಗಿದೆ.
ನಿಮ್ಮ ತಂದೆಗೆ ಅದು ಇಷ್ಟವಾಗದು.
ಏಕೋ, ಅವರನ್ನು ಇದಿರಿಸುವ ಧೈರ್ಯ ತೋರಿಸಿದ್ದಕ್ಕೇನು? ನಾನು ಪೃಥ್ವೀರಾಜನನ್ನು ಬಿಟ್ಟು ಅನ್ಯರ ಕೈ ಹಿಡಿಯುವವಳಲ್ಲ.
ಸಂಯೋಗಿತೆ ತನ್ನಲ್ಲಿ ಅನುರಕ್ತಳಾಗಿರುವಳೆಂಬ ಸುದ್ದಿ ಮತ್ತು ಜಯಚಂದ ತನ್ನನ್ನು ಅವಮಾನಿಸಲಿರುವನೆಂಬ ಸುದ್ದಿ - ಎರಡೂ ಪೃಥ್ವೀರಾಜನಿಗೆ ಮುಟ್ಟಿದವು.
ಗೆಳೆಯ, ಚಂದ, ನಾನು ಸಂಯೋಗಿತೆಯನ್ನು ವರಿಸದೇ ಹೋದರೆ ನನ್ನ ಗೌರವಕ್ಕೆ ಕುಂದೇ ಸರಿ.
ಆದರೆ ಅದು ಹೇಗೆ ಸಾಧ್ಯ, ಮಹಾರಾಜ?


ಜಯಚಂದ ನನಗೆ ಕನೋಜದಲ್ಲಿ ಪ್ರವೇಶ ಕೊಡಲಾರನಾದರೂ ನಿನ್ನಂತಹ ವಿದ್ವಾಂಸರಿಗೆ ಕೊಟ್ಟಾನು.
ಹಾಗಾಗಿ, ಚಂದನ ಜೊತೆಯಲ್ಲಿ ಪೃಥ್ವೀರಾಜ ಅವನ ಹಡಪದವನಂತೆ ವೇಷ ಮರೆಸಿ ಕನೋಜಕ್ಕೆ ಹೊರಟ. ಅವರ ಜತೆಗೆ ನೂರು ಮಂದಿ ವೀರ ಯೋಧರೂ ಸೇವಕರ ಸೋಗು ಧರಿಸಿ ಹೊರಟರು.
ಹಲವು ದಿವಸಗಳ ಪಯಣ ಮಾಡಿ ಕನೋಜವನ್ನು ಸೇರಿದರು.
ಮಹಾರಾಜ, ದೂರದಲ್ಲಿ ಹೊಳೆಯುತ್ತಿರುವ ಹೊಂಬಣ್ಣದ ಗೋಪುರ ಜಯಚಂದನ ಅರಮನೆಯದು.
ಮಹಾರಾಜನೆಂದು ನನ್ನನ್ನು ಕರೆಯಬೇಡ; ಸದ್ಯ ನಾನು ನಿನ್ನ ಸೇವಕನಲ್ಲವೇ?


ಜಯಚಂದ ಚಂದನಿಗೆ ಸಂಭ್ರಮದ ಸ್ವಾಗತವನ್ನು ನೀಡಿದ.
ಪೃಥ್ವೀರಾಜ ಬಲು ಸಮರ್ಥ ಯೋಧ ಎಂದು ಕೇಳಿದ್ದೇನೆ.
ನಿಜ, ತನ್ನ ಹಗೆ ಖಡ್ಗ ಎತ್ತುವುದರೊಳಗೆ ಆತ ಐವತ್ತು ಸಾರಿ ಹೊಡೆಯಬಲ್ಲನು.
ಜಯಚಂದನಿಗೆ ಆ ಮಾತು ರುಚಿಸಲಿಲ್ಲವಾದರೂ ಸುಮ್ಮನಿದ್ದ.
ನಮ್ಮೀ ಅತಿಥಿಗಳ ವಾಸಕ್ಕಾಗಿ ಏರ್ಪಾಡು ಮಾಡು.
ಅಲ್ಲಿಂದ ಜಯಚಂದ ತನ್ನ ಅರಮನೆಗೆ ಮರಳಿದ.
ಮರುದಿನ ಬೆಳಿಗ್ಗೆ ಜಯಚಂದ ಚಂದನನ್ನು ತಿರುಗಿ ಭೇಟಿಯಾದ.
ತಮಗೆಲ್ಲ ಅನುಕೂಲವಾಗಿದೆಯಷ್ಟೆ.
ಎಲ್ಲ ಸರಿಯಾಗಿದೆ. ತಾವೂ ಕುಳಿತಿರಿ.
ಜಯಚಂದನಿಗೆ ಅಲ್ಲಿದ್ದ ಹಡಪದವನನ್ನು ಕಂಡು ತುಂಬ ಮೆಚ್ಚಿತು.
ಈತ ಸಾಮಾನ್ಯ ಸೇವಕನಲ್ಲ.


ಈ ಸೇವಕನಲ್ಲಿ ಏನೋ ವಿಶೇಷವಿದೆ.
ಅಲ್ಲಿಂದ ಹೊರಡುತ್ತ ಕಿಟಕಿಯಿಂದ ಅವನನ್ನೇ ಬಿರಬಿರನೇ ನೋಡಿದ.
ಆತ ಸೇವಕನ ಹಾಗೆ ಕಾಣುವುದಿಲ್ಲ.
ತಕ್ಷಣವೇ ಜಯಚಂದ ತನ್ನ ಸೇನೆಯನ್ನು ಎಚ್ಚರಿಸಿದ.
ಎಲ್ಲ ದಾರಿಗಳಲ್ಲೂ ಕಾವಲಿರಿ. ಈ ಜನರ ಮೇಲೆ ಕಣ್ಣಿಟ್ಟಿರಿ.
ಅಷ್ಟರಲ್ಲಿ ಪೃಥ್ವೀರಾಜ ಸಂಯೋಗಿತೆ-ಯನ್ನು ಸಂಧಿಸಲು ಹವಣಿಸುತ್ತಿದ್ದ.
ಇಲ್ಲಿ ನಾವು ಬಹಳ ಸಮಯ ಇರುವಂತಿಲ್ಲ. ಅಷ್ಟರಲ್ಲೇ ಏನಾದರೂ ಮಾಡಬೇಕು.


ಸಂಯೋಗಿತೆ ಪೃಥ್ವೀರಾಜನನ್ನೇ ವರಿಸಲು ನಿರ್ಧರಿಸಿದುದು ಜಯಚಂದನಿಗ
ತಿಳಿಯುತ್ತಲೇ ಆತ ತನ್ನ ಹೊಂತವನ್ನು ಬದಲಿಸಿದ.
ಮಂತ್ರಿ, ಬಂಧ ಅತಿಥಿ ರಾಜರುಗಳಿಗೆ ತಿಳಿಸು- ನಾಳೆಯೇ ಸ್ವಯಂವರ, ಯಜ್ಞದ ದಿನ ಅಲ್ಲ- ಎಂದು.
ದೊರೆಯ ಇಷ್ಟ.
ಒಬ್ಬ ಚಕಿತ ಸೈನಿಕ ಪೃಥ್ವೀರಾಜನೆಡೆಗೆ ಧಾವಿಸಿ ಬಂದ.
ಮಹಾರಾಜರೇ, ಕಾಲಹರಣಕ್ಕೆ ಸಮಯವಿಲ್ಲ. ಸ್ವಯಂವರ ನಾಳೆಯೇ ಜರುಗಲಿದೆ.
ಇಷ್ಟು ಬೇಗನೇ.
ಹೌದು. ಜಯಚಂದ ನಿಮಗೆ ಅಪಮಾನ ಮಾಡಲು ನಿಮ್ಮ ಮೂರ್ತಿಯೊಂದನ್ನು ಸ್ವಯಂವರ ದ್ವಾರದಲ್ಲಿ ಇಡುವನಂತೆ.
ನನ್ನನ್ನು ಅವಮಾನಿಸ ಹೋದರೆ ತ ಶಾಸ್ತಿ ಅನು ವಿಸುತ್ತಾನ


ಮರುದಿನ ಸ್ವಯಂವರ ಮಂಟಪದ ಬಾಗಿಲಲ್ಲಿ ಪೃಥ್ವೀರಾಜನ ಮೂರ್ತಿಯನ್ನು ನಿಲ್ಲಿಸಿದ್ದರು. ಅರಸು ಮಕ್ಕಳು ತಮ್ಮ ಸ್ತುತಿಪಾಠಕರೊಂದಿಗೆ ಅಲ್ಲಿ ಸೇರಿದ್ದರು. ವರನ ಆಯ್ಕೆಗಾಗಿ ಸಂಯೋಗಿತೆಯನ್ನು ಸ್ವಯಂವರ ಮಂಟಪಕ್ಕೆ ಕರೆತಂದರು.
ಅವರು ವೇಷ ಮರೆಸಿಕೊಂಡು ಇಲ್ಲೇ ಎಲ್ಲಾದರೂ ಇದ್ದಾರು.
ಈಗೇನು ಮಾಡಲಿ?
ಕೊನೆಗೆ ಸಂಯೋಗಿತೆ ಅಲ್ಲಿ ನಿಲ್ಲಿಸಿದ್ದ ಪೃಥ್ವೀರಾಜನ ಮೂರ್ತಿಯ ಕೊರಳಿಗೆ ಮಾಲೆ ಹಾಕಿದಳು.
ನನ್ನ ಪತಿಯಾಗಲು ಯೋಗ್ಯ ಪೃಥ್ವೀರಾಜ ಒಬ್ಬನೇ.


ಅವ-
ರನ್ನು ತಡೆ-
ಯಿರಿ.
ಸಂಯೋಗಿತೆ
ಪೃಥ್ವೀರಾಜನ
ಜತೆಗೆ ಕುದುರೆ-
ಯನ್ನೇರಿದಳು
ಬನ್ನಿ
ಸೈನಿಕರೇ,
ದಾರಿ ಬಿಡಿಸಿ-
ಕೊಂಡು ಹೋಗುವ


ಕ್ಷಣಮಾತ್ರದಲ್ಲಿ ಜಯಚಂದನ ಅಪಾರ ಸೇನೆ ಅವರನ್ನು ಸುತ್ತುವರಿಯಿತು.
ಏನೇ ಆಗಲಿ, ಪೃಥ್ವೀರಾಜನನ್ನು ಹಿಡಿಯಲೇಬೇಕು.
ಜಯಚಂದನ ಸೇನೆಯಲ್ಲಿದ್ದ ಮೀರ್ ಬಂಧನ್ ಎಂಬ ಫಾರಸಿಕ ಅಧಿಕಾರಿ, ಮೊದಲು ಪೃಥ್ವೀರಾಜನ ಮೇಲೆ ಏರಿ ಹೋದ.



ಆದರೆ ಮೀರ್‌ಬಂದನ್‌ನ ಸೇನೆ ಪೃಥ್ವೀ-
ರಾಜನ ಸೇನೆಗೆ ಎಷ್ಟೂ ಸಾಟಿಯಾಗಿರಲಿಲ್ಲ.
ಮೀರ್ ಬಂದನ್ ಸಾಯುತ್ತಲೇ ಅವನ
ಸೇನೆಯೆಲ್ಲ ಚೆಲ್ಲಾಪಿಲ್ಲಿಯಾಯಿತು.
ಅಲ್ಲಿಂದ ಪೃಥ್ವೀರಾಜನ ಸೇನೆ ಜಯಚಂದನ ಮುಖ್ಯ ದಳವನ್ನು ಇದಿರಿಸಿತು.


ಮಹಾರಾಜ
ಪೃಥ್ವೀರಾಜರಿಗೆ
ಜಯವಾಗಲಿ.
ಪೃಥ್ವೀರಾಜ ತನ್ನ ಸೈನಿಕರೊಡನೆ
ಹಗೆಯ ಪಡೆಯನ್ನು ಸೀಳಿ ಮುಂದೆ
ಸಾಗಿದನು. ಅವರ ಹಿಗ್ಗೇ ಹಿಗ್ಗು.
ಆದರೆ ಆ ಹಿಗ್ಗು ಬಲು ಹೊತ್ತು ಉಳಿ-
ಯಲಿಲ್ಲ; ಅವರು ಸಾಗಲಿರುವ ದಾರಿ-
ಯಲ್ಲಿ ಮುಂದೆ ಮತ್ತಷ್ಟು ಶತ್ರು ಸೇನೆ
ಕಾದಿತ್ತು.
ಈ ಬಾರಿ ಪೃಥ್ವೀರಾಜನಿಗೆ ತೀಕ್ಷ್ಣ
ಗಾಯವೂ ಆಯಿತು. ಆದರೆ ಅವನು
ಬಾಣವನ್ನು ಎಳೆದು ತೆಗೆದ.
ನಮ್ಮ ಉಪಾಯವನ್ನು
ಬದಲಿಸುವ. ಗುಡ್ಡಗಾಡಿನ
ದಾರಿ ಹಿಡಿದಲ್ಲಿ ಹಗೆಯನ್ನು
ಇದಿರಿಸಲು ಸುಲಭವಾದೀತು.


ಅದು ಸುರಕ್ಷಿತ ದಾರಿಯಾಗಿದ್ದರೂ, ಅವರ ಓಟದ ವೇಗ ನಿಧಾನಿಸಿತು. ಹಾಗಾಗಿ ಹಗೆಗಳು ಮತ್ತಿಷ್ಟು ಹತ್ತಿರಕ್ಕೆ ಬಂದರು.
ಇಲ್ಲಿ ಒಬ್ಬ ಸೈನಿಕನನ್ನು ಮಾತ್ರ ಹಗೆಯನ್ನು ತಡೆಯಲು ನಿಲ್ಲಿಸಿ ಉಳಿದವರು ದಿಲ್ಲಿಯ ದಾರಿ ಹಿಡಿಯೋಣ.
ಅದಾಗದು.
...ನಾನು ಹೇಡಿ ಅಲ್ಲ. ಇಲ್ಲಿ ನಿಂತೇ ಹಗೆಯೊಡನೆ ಕಾದಾಡುತ್ತೇನೆ.
ಮಹಾರಾಜ, ನಿಮ್ಮ ಪರಾಕ್ರಮದ ವಿಷಯದಲ್ಲಿ ಅನುಮಾನವಿಲ್ಲ. ಆದರೆ ನಾವು ಬಂದದ್ದು ಹಗೆಯೊಡನೆ ಕಾದುವುದಕ್ಕಲ್ಲ. ನಿಮಗಾದ ಅಪಮಾನದ ಸೇಡು ತೀರಿಸುವುದಕ್ಕೆ.
ನೀವು ನಿಮ್ಮ ವಧುವಿನೊಡನೆ ದಿಲ್ಲಿಯನ್ನು ಸೇರದೇ ಹೋದರೆ ಆ ಕೆಲಸ ಆಗುವುದಿಲ್ಲ.


ಆತನ ಬಲವಂತಕ್ಕೆ ಒಪ್ಪಿ ಪೃಥ್ವೀರಾಜನು ಬಾಷ ರಾಯ್ ಎಂಬಾತನನ್ನು, ಹಗೆಗಳನ್ನು ತಡೆಯಲು ನಿಲ್ಲಿಸಿ ಉಳಿದವರೊಡನೆ ಮುಂದುವರಿದ.
ಬಾಷ ರಾಯ್ ಶೂರ ಯೋಧನಾಗಿದ್ದನು.
ಆದರೆ ಶತ್ರು ಸೈನ್ಯ ಅವನ ಸೈನ್ಯಕ್ಕಿಂತ ಎಷ್ಟೋ ದೊಡ್ಡದಿತ್ತು.
ಬಾಷರಾಯನನ್ನು ಕೊಂದ ಹಗೆಗಳು ಹಿಗ್ಗಿ ಮುಂದಕ್ಕೆ ಧಾವಿಸಿದರು.
ಎಚ್ಚರ! ಇಕ್ಕಟ್ಟಿನಲ್ಲಿ ನಮ್ಮನ್ನು ತಡೆಯಲು ಇನ್ನೊಬ್ಬ ನಿಂತಿದ್ದಾನೆ.


ಪೃಥ್ವೀರಾಜನಿಗಾಗಿ ಅನೇಕ ಮಂದಿ ಪ್ರಾಣ ತೆತ್ತರು.
ಆಗ ಪೃಥ್ವೀರಾಜನ ಸೇನಾನಿ ಕಾನ್ಹಾ ತಾನೇ ಹಗೆಗಳನ್ನು ಇದಿರಿಸಲು ನಿಶ್ಚಯಿಸಿದ.
ಕಾನ್ಹಾನ ಕುದುರೆಯೂ ಹಗೆಗಳ ಮೇಲೆ ಎಗರಿ ಬಿತ್ತು.
ಕಠಿಣ ಕಾಳಗ ನಡೆದ ಮೇಲೆ...
ಅಗೋ, ಅವನೂ ಮಡಿದು ಬಿದ್ದ.
ಇನ್ನು ಪೃಥ್ವೀರಾಜನನ್ನು ಹಿಡಿಯುವುದು ಸುಲಭ.


ದರೋ! ಸಮಯ ಮಿಂಚಿತ್ತು. ಪೃಥ್ವೀರಾಜ ದಿಲ್ಲಿಯ ದುರ್ಗವನ್ನು ಸೇರಿಯಾಗಿತ್ತು.


ಅಲ್ಲಿ ಪೃಥ್ವೀರಾಜನ ಬಲವಾದ ಸೇನೆಯನ್ನು ಇದಿರಿಸಲು ಧೈರ್ಯ ಸಾಲದೇ,
ಜಯಚಂದ ಹತಾಶನಾಗಿ ಹಿಂದೆರಳಿದ.


ದಿಲ್ಲಿಯಲ್ಲಿ ಸಂಭ್ರಮವೇ ಸಂಭ್ರಮ.
ಪೃಥ್ವೀರಾಜ ಮಹಾರಾಜರಿಗೆ ಜಯವಾಗಲಿ! ಮಹಾರಾಣಿ ಸಂಯೋಗಿತೆಗೆ ಜಯವಾಗಲಿ!
ಅಂತು ಶಾಂತಿ ನೆಲೆಸಿತು. ಪೃಥ್ವೀರಾಜ ತನ್ನ ಇನಿಯಳ ಪ್ರೇಮದಲ್ಲಿ ಮೈಮರೆತ.
ಇದೇನು, ನಮ್ಮ ಮಹಾರಾಜರು ಬಲು ದಿನಗಳಿಂದ ಕಣ್ಣಿಗೇ ಬೀಳಅಲ್ಲವಲ್ಲ!
ಅವರು ಅರಮನೆಯಿಂದ ಹೊರಬರುವುದೇ ಇಲ್ಲ.




ಲ್ಲರಿಗೂ ಂಬ ಬೇಸರ.
ಹೌದು, ನಮ್ಮ ಅರಸು ಮದುವೆಯಾದ ದಿನದಿಂದ ಆಸ್ಥಾನಕ್ಕೆ ಕಾಲಿರಿಸಿದ್ದೇ ಇಲ್ಲ.
ಇದರಿಂದ ಪೃಥ್ವೀರಾಜನ ಗುರುವಿಗೂ ಬೇಸರವೇ.
ಇದೇನು ದುರ್ವಿಧಿ! ಪೃಥ್ವೀರಾಜನಂತಹ ವೀರ ಧೀಮಂತ ಅರಸು ಒಬ್ಬಳು ಸ್ತ್ರೀಯ ಮೋಹಕ್ಕೆ ಬಲಿ ಬಿದ್ದು ತನ್ನ ಕರ್ತವ್ಯ ಮರೆಯುವದೆಂದರೆ.
ಆದರೆ ಸಂಯೋಗಿತೆ ಸಾಮಾನ್ಯ ಸ್ತ್ರೀ ಅಲ್ಲವಷ್ಟೆ.
ರಾಜ್ಯ ಕಾರ್ಯವೂ ಸಾಮಾನ್ಯ ವಿಷಯ ಅಲ್ಲವಷ್ಟೆ.
ಹೀಗೆ ಪೃಥ್ವೀರಾಜ ಪ್ರೇಮದಲ್ಲಿ ಮೈಮರೆತ ಕಾಲದಲ್ಲೇ ಘಜನಿಯ ಶಹಾಬುದ್ದೀನ ಘೋರಿ ದಿಲ್ಲಿಯ ಮೇಲೆ ದಂಡೆತ್ತಿ ಬರಲು ಸಜ್ಜುಮಾಡುತ್ತಿದ್ದ.



ನಾನು ಭಾರತ-ವನ್ನು ಗೆಲ್ಲಲು ಏಳು ಬಾರಿ ದಂಡೆತ್ತಿ ಹೋದೆ. ಆದರೆ ಎಲ್ಲವೂ ನಿಷ್ಫಲ-ವಾದುವು.
ಪೃಥ್ವೀರಾಜನೇ ಅದಕ್ಕೆ ಕಾರಣ!
ಏಳು ಸಲವೂ ಪೃಥ್ವೀರಾಜ ಅವನನ್ನು ಸೋಲಿಸಿ, ಸೆರೆಹಿಡಿದು, ಅನಂತರ ಕ್ಷಮಿಸಿ ಹಿಂದಕ್ಕೆ ಕಳುಹಿಸಿದ.


ಅತ್ರ ಆ ಬೀಜದಿಂದ 'ಕಾರ್ತಿಕೇಯ' ಶಿಶು ಹೊರಬಂದಿತು. ಆರು ದ ಆ ಕೂಸು, ಆ ಆರು ಮಂದಿ ಯರನ್ನು ಕಂಡು ನಗತೊಡಗಿತು. ಅಚ್ಚರಿ!
ಅವನನ್ನು ಮನೆಗೆ ಒಯ್ಯುವ; ಅವನನ್ನು ಮೊದಲು ಕಂಡವರೇ ನಾವು.
ಅದೇ ವೇಳೆಗೆ ಅಲ್ಲಿ ಸ್ತ್ರೀರೂಪದಲ್ಲಿ ಗಂಗೆಯೂ ಕಾಣಿಸಿದಳು; ಅಗ್ನಿಯೂ ಕಾಣಿಸಿಕೊಂಡ.
ಅವನನ್ನು ಹೊತ್ತವಳು ನಾನು; ಆ ಕೂಸು ನನಗೆ.
ಇಲ್ಲ, ಅದು ನಮಗೆ ಸಲ್ಲಬೇಕಾದ ಮಗು.
ಕ್ಕೆ ಸರಿಯಾಗಿ ಶಿವ ಪಾರ್ವತಿ ಸ್ಥಳಕ್ಕೆ ಆಗಮಿಸಿ ವಾದವನ್ನು ಬಗೆಹರಿಸಿದರು.
ಶೆಗಳ ದಂಡ- ಕನಾಗುವ ಈ ನ್ನು ಪಾಲಿಸುವ ಪಾರ್ವತಿ ಗೇ ಇರು ದು.
ಪಾರ್ವತಿ ಆ ಕೂಸನ್ನು ಮುದ್ದಿನಿಂದ ಎತ್ತಿ ಬಳಿಕ -
ಇಂ
-ಶಿವನ ಜತೆ- ಯಲ್ಲಿ ಕೈಲಾಸ ಪರ್ವತಕ್ಕೆ ಮರಳಿದಳು.


ಕಾಲಕ್ರಮದಲ್ಲಿ ಕಾರ್ತಿಕೇಯನು ಬೆಳೆದು ದೊಡ್ಡವನಾಗಿ ದೇವತೆಗಳ ದಂಡನ್ನೆತ್ತಿಕೊಂಡು ತಾರಕಾಸುರನ ಮೇಲೆ ಯುದ್ಧ ನಡೆಯಿಸಿ ಅವನನ್ನು ಸಂಹರಿಸಿದ.


ದ್ರನಿಗೆ ತಿರುಗಿ ಅವನ ಸಿಂಹಾಸನ ಸಿಗುವಂತಾಯಿತು.
ದಲ್ಲಿ ಇನ್ನೊಮ್ಮೆ ಸುಖ,ಶಾಂತಿಗಳು ನೆಲೆಸಿದುವು.


ಈ ಬಾರಿ ಘೋರಿಗೆ ತುಂಬ ಆತ್ಮವಿಶ್ವಾಸ.
ದೇಕೆಂದರೆ, ಅವಶ್ಯ ಬಿದ್ದರೆ ತಾನು ಸಹಾ-
ಯಕ್ಕೆ ಬರುವುದಾಗಿ ಜಯಚಂದ ತಿಳಿಸಿದ್ದ.
ಜಯಚಂದ ನನ್ನ ಪಕ್ಷ. ಈ ಬಾರಿ ಪೃಥ್ವೀರಾಜನಿಗೆ ಸೋಲು ಖಂಡಿತ.
ಹೀಗಾಗಿ ಜಯಚಂದನ ಸಹಾಯ-
ದಿಂದ ಶಹಾಬುದ್ದೀನ ಮತ್ತಷ್ಟು
ದೊಡ್ಡ ಸೇನೆಯನ್ನು ಕಲೆ ಹಾಕಿದ.



ಶಹಾಬುದ್ದೀನನ ಸೇನೆಯ ಬರವನ್ನು ಕಂಡು ದಿಲ್ಲಿಯ ಪ್ರಮುಖರು ತತ್ತರಗೊಂಡರು.
ಅಲ್ಲ, ಮಹಾರಾಜರಿಗೆ ತಿಳಿಸುವುದಾದರೂ ಹೇಗೆ? ತುಸು ತೊಂದರೆಯಾದರೆ ಸಿಟ್ಟಿಗೇಳುತ್ತಾರೆ.
ಅವನಿಗೆ ನಾನೊಂದು ಪತ್ರ ಬರೆಯುತ್ತೇನೆ.
ಗುರುವಿನ ಕಾಗದವೇ? ಏನು ಸಂಗತಿ?
ವೈರಿ ನಮ್ಮ ದೇಶವನ್ನು ಆಕ್ರಮಿಸಲು ಯೋಚಿ-ಸಿದ್ದಾನೆ. ದೊರೆಯೇ, ಎಲ್ಲ ಕೆಡುವ ಮುನ್ನ ಎಚ್ಚರ ತಾಳು.
ಏನು ನಾಚಿಕೆ? ದೊರೆಯಾದ ನಾನು ನನ್ನ ಕರ್ತ-ವ್ಯವನ್ನೇ ಮರೆತಿದ್ದೇ-ನಲ್ಲ.


ಥ್ವೀರಾಜನ ದಂಡು ದುರ್ಬಲಗೊಂಡಿತ್ತು. ಹಿಂದೆ ಜಯಚಂದನೊಡನೆ ಕಾದಾಡಿ ವನ ಸೇನಾನಿಯೂ, ಶ್ರೇಷ್ಠ ಸೈನಿಕರೂ ಮಡಿದು ಹೋಗಿದ್ದರು. ಆದರೂ ಆತ ಳಿದುಳಿದ ಸೈನಿಕರನ್ನು ಕೂಡಿಸಿ ವೈರಿಯನ್ನು ಇದಿರಿಸಲು ಹೊರಟ.


ಶಹಾಬುದ್ದೀನ ಘೋರಿಯ ಸೇನೆಯಲ್ಲಿ ಮೂವರು ನುರಿತ ನಾಯಕರಿದ್ದರು


ಆ ಉಭಯ ಸೇನೆಗಳೂ ಪರಸ್ಪರ ಸಂಧಿಸಿ ಕಾದಾಡತೊಡಗಿದುವು.



ಪೃಥ್ವೀರಾಜನೂ, ಅವನ ಸೈನಿಕರೂ ಅಸಾಧಾರಣ ಪರಾಕ್ರಮದಿಂದ ಕಾದಾಡಿದರು.



ಆದರೆ ಪೃಥ್ವೀರಾಜನ ಸಣ್ಣ ಸೇನೆ ನುಚ್ಚುನೂರಾಗಿ ಆತ ಘೋರಿಯ ಸೈನಿಕರ ಕೈಗೆ ಸಿಲುಕಿದ.


ಸೆರೆಹಿಡಿದ ಪೃಥ್ವೀರಾಜನನ್ನು ಘಜನಿಗೆ ಒಯ್ದರು.
ದಿಲ್ಲಿಯ ಆ ಭಯಂಕರ ಸಿಂಹವನ್ನು ನೋಡಿ.
ಹ್ಹ ಹ್ಹ ಹ್ಹಾ
ತಲೆ ತಗ್ಗಿಸು. ನನ್ನನ್ನು ಎವೆ-ಯಿಕ್ಕದೆ ನೋಡುವಷ್ಟು ಧೈರ್ಯವೇ?
ಏನೂ ಅಂಜದೆ ಪೃಥ್ವೀರಾಜ ಅವನನ್ನೇ ದಿಟ್ಟಿಸುತ್ತಿದ್ದ.
ಕಾವಲಿಗರೇ ಅವನ ಕಣ್ಣನ್ನೇ ತೆಗೆಯಿರಿ.
ಅವರು ಪೃಥ್ವೀರಾಜನ ಕಣ್ಣುಗಳನ್ನು ಸುಟ್ಟುಬಿಟ್ಟರು.


ಪೃಥ್ವೀರಾಜನ ದುರ್ದೈವದ ಸುದ್ದಿ ಕವಿ-ಚಂದನಿಗೆ ತಿಳಿಯುತ್ತಲೇ ಆತ ಸಾಧು-ವಿನ ವೇಷ ಧರಿಸಿ ಘಜನಿಯ ಹಾದಿಯನ್ನು ಹಿಡಿದ.
ಶಹಾಬುದ್ದೀನ ಬಿಲ್ಲುಗಾರಿಕೆ ಅಭ್ಯಸಿಸು-ತ್ತಿದ್ದಾಗ ಚಂದ ಅವನನ್ನು ಸಂಧಿಸಿದ.
ನನ್ನ ಗುರಿ ಹೇಗಿದೆ ಅನ್ನುತ್ತೀ?
ಇದೆ, ತಕ್ಕಮಟ್ಟಿಗೆ. ಆದರೆ ಪೃಥ್ವೀರಾಜನ ಕೌಶಲಕ್ಕೆ ಎಂದೂ ಸಾಟಿಯಾಗದು. ---
... ಆತ ಕಂಚಿನ ಜಾಗಟೆಯಲ್ಲಿ ಸಹ ಅಲಗಿಲ್ಲದ ಅಂಬಿನಿಂದ ತೂತು ಕೊರೆದಾನು.
ಅಸಾಧ್ಯ!
ಅಸಾಧ್ಯವೇನಲ್ಲ. ಈಗಲೂ ಕಣ್ಣಿಲ್ಲದಾಗಲೂ ಅವನು ಜಾಗಟೆಯ ಸದ್ದನ್ನು ಆಲಿಸಿಯೇ ಅದಕ್ಕೆ ಗುರಿಯಿಡಬಲ್ಲ.
ಅಹುದೇ? ಪರೀಕ್ಷಿಸು-ತ್ತೇನೆ. ಆತ ಹಾಗೆ ಮಾಡಲು ತಪ್ಪಿದರೆ ನಿನ್ನ ತಲೆಯನ್ನು ತೆಗೆದೇನು.


ಚಂದ ಪೃಥ್ವೀರಾಜನನ್ನು ಸೆರೆಮನೆಯಲ್ಲಿ ಭೇಟಿಯಾಗಿ ತನ್ನ ಹಂಚಿಕೆಯನ್ನು ತಿಳಿಸಿದ.
ಆ ಪ್ರದರ್ಶನದಲ್ಲಿ ನೀನು ಶಹಾಬುದ್ದೀನನ ಮೇಲಿನ ಹಗೆ ತೀರಿಸು... ಅನಂತರ ನಾವು ಒಬ್ಬರನ್ನೊಬ್ಬರು ತಿವಿದುಕೊಂಡು ಮಡಿಯೋಣ.
ಅವನು ಎಲ್ಲಿ ಕುಳಿತಿರುವನೆಂದು ನನಗೆ ತಿಳಿಯುವ ಬಗೆ ಹೇಗೆ?
ಅದನ್ನು ನನಗೆ ಬಿಡು
ಆಗಲಿ.
ಮಹಾರಾಜ, ಪೃಥ್ವೀರಾಜರು ಪ್ರದರ್ಶನಕ್ಕೆ ಒಪ್ಪಿದ್ದಾರೆ. ಆದರೆ, ಅವರೂ ದೊರೆಯಾದುದರಿಂದ ಸಾಮಾನ್ಯರ ಮಾತನ್ನು ಕೇಳರು. ಅಂಬನ್ನೆಸೆಯಲು ಅಪ್ಪಣೆ ನಿಮ್ಮಿಂದಲೇ ಬರಬೇಕು.
ಆಗಲಿ.


ಮರುದಿನ ಆಸ್ಥಾನದಲ್ಲಿ...
ಸಿದ್ಧನಾಗು, ಗುರಿಹಿಡಿ.
ಆ ಅಪ್ಪಣೆ ಬರುತ್ತಲೇ ಪೃಥ್ವೀರಾಜ ತಿರ್ರನೆ ತಿರುಗಿ, ಶಹಾಬುದ್ದೀನನ ಧ್ವನಿಯು ಮೇಲಿಂದ
ಅವನಿಗೇ ಗುರಿಯನ್ನಿಟ್ಟ.
ಬಾಣ ಬಿಡು... ಅಯ್ಯೋ!


ಪೃಥ್ವೀರಾಜನಿಗೆ ತನ್ನ ಚುರುಕು ಕಿವಿಗೆ ಬಿದ್ದ ಆ ಧ್ವನಿಯಿಂದ ಶತ್ರು ಸತ್ತದ್ದು ಗೊತ್ತಾಯಿತು.
ಇನ್ನು ಅಲ್ಲಿದ್ದ ವೈರಿ ಸೈನಿಕರಿಂದ ಅವಮಾನದ ಮರಣ ಬೇಡವೆಂದು, ಪೃಥ್ವೀರ ಮತ್ತು ಚಂದರು ಒಬ್ಬರನ್ನೊಬ್ಬರು ತಿವಿದುಕೊಂಡರು.
ಮಹಾರಾಜ ಪೃಥ್ವೀರಾಜರಿಗೆ ಜಯವಾಗಲಿ!

ಪ್ರಶ್ನೆಗಳು

1) ಜಯಚಂದನ ಮಹತ್ವಾಕಾಂಕ್ಷೆ ಏನಿತ್ತು?
2) ಪೃಥ್ವೀರಾಜನಿಗೂ ಜಯಚಂದನಿಗೂ ಹೇಗೆ ವೈರ ಹುಟ್ಟಿತು?
3) ಜಯಚಂದನು ಪೃಥ್ವೀರಾಜನಿಗೆ ಅಪಮಾನ ಮಾಡಲು ಅದಾವ ಉಪಾಯ ಮಾಡಿದನು?
4) ಪೃಥ್ವೀರಾಜನು ಸಂಯೋಗಿತೆಯ ಸ್ವಯಂವರಕ್ಕೆ ಬರಲು ಏಕೆ ನಿರ್ಧರಿಸಿದನು?
5) ಸಂಯೋಗಿತೆಯು ಪೃಥ್ವೀರಾಜನನ್ನು ವರಿಸಿದ್ದು ಹೇಗೆ?
6) ಜಯಚಂದನಿಗೆ ಪೃಥ್ವೀರಾಜನನ್ನು ಏಕೆ ಸೆರೆ ಹಿಡಿಯಲಾಗಲಿಲ್ಲ?
7) ಘೋರಿಯು ಪೃಥ್ವೀರಾಜನನ್ನು ಹೇಗೆ ಸೋಲಿಸಿದನು?
8) ಚಂದನು ಘೋರಿಯನ್ನು ನಾಶ ಮಾಡಲು ಹೂಡಿದ ಯೋಜನೆ ಏನಿತ್ತು?

ಅಧಿಕೃತ ಮಾರಾಟಗಾರರು: ಇಂಡಿಯಾ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು-9


ಕರ್ಣ
. 26 ರೂ. 1.50
ಕನ್ನಡ ರೂಪಾಂತರ
ಡಾ॥ ಕೆ. ಶಿವರಾಮ ಕಾರಂತ

ಮಹಾಭಾರತವು ಮಹಾ ನಾಯಕರ ಒಂದು ಚಿತ್ರ ಶಾಲೆ. ಅವರಲ್ಲಿ ಕರ್ಣನೇ ಅತ್ಯಂತ ಧೀರೋದಾತ್ತ ವ್ಯಕ್ತಿ. ವಿಧಿಯು ಅವನಿಗೆ ನ್ಯಾಯವಾಗಿ ಸಲ್ಲಬೇಕಾದದ್ದನ್ನೆಲ್ಲ ಕಸಿದುಕೊಂಡಿತು. ಆದರೆ ಅವನು ಹೋರಾಡಿ, ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ಬಯಸುವುದೆಲ್ಲವನ್ನೂ ಸಾಧಿಸಿದನು.

ಕರ್ಣನು ಉಳಿದ ಐವರಷ್ಟೇ ಪಾಂಡವ ರಾಜ ಕುಮಾರನಾಗಿದ್ದನು. ಆದರೆ ಅವನಿಗೆ ತನ್ನ ಕುಲದ ನೆಲೆಯು ಗೊತ್ತಾಗಲಿಲ್ಲ. ಅದು ತಿಳಿದಾಗ ಅದನ್ನು ನಿರಾಕರಿಸದ ಹೊರತು ಬೇರೆ ದಾರಿ ಇರಲಿಲ್ಲ. ಅವನನ್ನು ಸಾಮಾನ್ಯನಂತೆಯೇ ಬೆಳೆಸಲಾಯಿತು. ಆದ್ದರಿಂದ ಅವನು ಅನೇಕ ಬಾರಿ ಅಪಮಾನಕ್ಕೊಳಗಾದನು. ಗುರುಗಳು ಅವನಿಗೆ ಕಲಿಸಲು ಸಿದ್ಧರಿರಲಿಲ್ಲ. ತನ್ನ ಶೌರ್ಯವನ್ನು ಪ್ರಕಟಿಸಲು ಅವನಿಗೆ ಅವಕಾಶವಿರಲಿಲ್ಲ. ಆದರೆ ಅವನೆಂದೂ ಹತಾಶನಾಗಲಿಲ್ಲ. ಅವನು ವೀರಾಧಿವೀರ ನೆನಿಸಿದ ಅರ್ಜುನನ್ನು ಎದುರಿಸಿ, ಅವನ ಜಗದ್ವಿಖ್ಯಾತಿಗೆ ಸವಾಲು ಹಾಕಿದನು.

ಕೌರವನಾದ ದುರ್ಯೋಧನನು ಅವನಿಗೆ ರಾಜತ್ವ ವನ್ನು ದಯಪಾಲಿಸಿ, ಅವನ ಅಂತಸ್ತನ್ನು ಏರಿಸಿದನು. ಈ ಉಪಕಾರಕ್ಕಾಗಿ ಕರ್ಣನು ಕೊನೆಯ ವರೆಗೂ ದುರ್ಯೋಧನನಿಗೆ ನಿಷ್ಠನಾಗಿ ಉಳಿದನು.

Printed by H. K. Nasta at IBH Printers, Marol Naka, Mathuradas Vissanji Road, Andheri East, Bombay Published by IBH Prakashana, Gandhinagar, Bangalore-9.

Editor: Anant Pai. Retold by: Kamala Chandrakant Artwork : Ram Waeerkar



ಕರ್ಣ
ಯಾದವ ವಂಶದ ರಾಜ ಕುಂತಿಭೋಜನಿಗೆ ಮಕ್ಕಳಿರಲಿಲ್ಲ. ಆತ ತನ್ನ ಸೋದರಿಯಾದ ಪೃಥೆ ಎಂಬವಳನ್ನು ದತ್ತು ಪಡೆದ; ಅವಳಿಗೆ ಕುಂತಿ ಎಂಬ ನಾಮಕರಣ ಮಾಡಿದ.



ಒಂದು ದಿನ ಕೋಪಿಷ್ಠ ಸ್ವಭಾವದವರೆಂದು ಪ್ರಸಿದ್ಧಿ ಪಡೆದ ದೂರ್ವಾಸ ಋಷಿಗಳು ಕುಂತಿಭೋಜ ದೊರೆಯಲ್ಲಿಗೆ ಬಂದರು.
ಈ ಮಹಾ ಋಷಿಗಳು ನಮ್ಮ ಅತಿಥಿಗಳು; ಅವರ ಆದರೋಪಚಾರಗಳನ್ನು ಚೆನ್ನಾಗಿ ನೋಡಿಕೊಂಡಿರು.
ಒಂದು ವರ್ಷ ಕಾಲದ ತನಕವೂ ಕುಂತಿ ತುಂಬ ಎಚ್ಚರದಿಂದ, ಭಕ್ತಿಯಿಂದ ಅವರನ್ನು ನೋಡಿಕೊಂಡಳು.
ಸುದೈವಕ್ಕೆ ವರ್ಷ ಮುಗಿಯುತ್ತ ಬಂದಿದೆ. ಏನೊಂದು ಅಪಚಾರವೂ ಸಂಭವಿಸಲಿಲ್ಲ.
ದೂರ್ವಾಸರಿಗೂ ತುಂಬ ಸಂತೋಷವಾಗಿತ್ತು.
ನಿನಗೊಂದು ಮಂತ್ರೋಪದೇಶ ಮಾಡುತ್ತೇನೆ. ಅದನ್ನು ಪಠಿಸಿ ಯಾವ ದೇವರನ್ನು ನೆನೆದರೂ ಆತ ಪ್ರತ್ಯಕ್ಷನಾಗಿ, ತನಗೆ ಸಮಬಲನಾದ ಒಬ್ಬ ಮಗನನ್ನು ಅನುಗ್ರಹಿಸುತ್ತಾನೆ.


ದೂರ್ವಾಸರು ತೆರಳಿದ ಬಳಿಕ –
ಅದು ನಿಜವಾದೀತೇ? ಸೂರ್ಯದೇವ ನನ್ನನ್ನು ಕಂಡು ಮುಗುಳ್ನಗೆ ಬೀರು-ವಂತಿದೆ. ಅವನನ್ನು ಬರಮಾ-ಡಿಕೊಂಡರೆ ಹೇಗೆ?
ಆ ಮಂತ್ರ ತನ್ನ ಕೆಲಸವನ್ನು ಮಾಡಿಯೇ ಬಿಟ್ಟಿತು
ನಿನ್ನ ಇಚ್ಛೆಯಂ-ತಹ ಮಗನು ಹುಟ್ಟುತ್ತಾನೆ.
ಅಯ್ಯೋ, ನನಗೆ ವಿವಾಹವೇ ಆಗಿಲ್ಲ. ನಾನು ಬರಿದೆ ಪರೀಕ್ಷೆಗಾಗಿ ನಿನ್ನನ್ನು ಕರೆದೆ. ಈಗ ನೀನು ಮರಳು.
ಆದರೆ ಸೂರ್ಯ ಮರಳುವಂತಿರಲಿಲ್ಲ; ಮಂತ್ರ ಶಕ್ತಿ ಅವನನ್ನು ಅಲ್ಲೇ ನಿಲ್ಲಿಸಿಕೊಂಡಿತು. ಆಗ ಸೂರ್ಯನ ಬಳುವಳಿಯೆಂದು ಕವಚ ಕುಂಡಲ ಸಹಿತವಾಗಿ ಕರ್ಣನು ಜನಿಸಿದನು.



ಅಯ್ಯೋ ಮಗನೇ, ಕ್ಷಮಿಸು, ನಿನ್ನನ್ನು ನಾನು ತಿರುಗಿ ಎಂದಾದರೂ ಕಂಡೆನಾದರೆ, ನೀನು ನನ್ನುವನ್ನೆನ್ನುವ ಧೈರ್ಯ ನನಗೆ ಬಂದೀತೇ?
ನದಿಯಲ್ಲಿ ತೇಲಿ ಬರುತ್ತಿರುವ ಬುಟ್ಟಿಯೊಂದನ್ನು ಅಧಿರಥನೆಂಬ ಸಾರಥಿ ನೋಡಿ ಅದರಲ್ಲಿ ಕಣ್ಣು ಹಾಯಿಸಿದ. ಅವನಿಗೆ ಮಕ್ಕಳಿರಲಿಲ್ಲ.
ಅಹಾ, ಎಂತಹ ಸುಂದರ ಶಿಶು! ಯಾವಳೋ ಕರುಣೆಯಿಲ್ಲದ ತಾಯಿ ಇದನ್ನು ತೊರೆದಿದ್ದಾಳೆ.
ಆತ ಆ ಶಿಶುವನ್ನು ತನ್ನ ಮಡದಿ ರಾಧೆಯ ಬಳಿಗೆ ಒಯ್ದ.
ಕವಚಕುಂಡಲ ಸಹಿತವಾದ ಈ ಕೂಸನ್ನು ವಸುಷೇಣ ಎಂದು ಕರೆಯುವ.
ಅಲ್ಲಲ್ಲ, ಆತ ರಾಧೆಯಾದ ನಿನ್ನ ಮಗು ಅವನಿಗೆ ರಾಧೇಯ ಎಂಬುದೇ ಉಚಿತ ಹೆಸರು.



ಕರ್ಣನ ಬಾಲ್ಯ
ಬಲು ಸುಖದಿಂದ ಕಳೆಯಿತು.


ಅತ್ತ, ಕುಂತಿ ಹಸ್ತಿನಪುರದ
ದೊರೆಯಾದ ಪಾಂಡು ರಾಜನನ್ನು
ಮದುವೆಯಾದಳು; ಆತ ತನ್ನ
ಕುರುಡು ಅಣ್ಣನಾದ ಧೃತರಾಷ್ಟ್ರನ
ಹೆಸರಿನಲ್ಲಿ ರಾಜ್ಯವಾಳುತ್ತಿದ್ದ.


ಆದರೆ ಪಾಂಡುವಿಗೆ ಒಂದು ಶಾಪದ
ದೆಸೆಯಿಂದ ಮಕ್ಕಳಾಗಲೇ ಇಲ್ಲ. ಆತ
ತನ್ನ ಇಬ್ಬರು ಮಡದಿಯರಾದ ಕುಂತಿ,
ಮಾದ್ರಿಯರ ಜತೆಗೆ ಅರಣ್ಯವನ್ನು
ಸೇರಿ ಅಲ್ಲಿ ವಾಸಿಸತೊಡಗಿದ.


ಆದರೊಂದು ದಿನ-
ಪ್ರಿಯೇ, ಮಕ್ಕಳಿಲ್ಲದ ನಿನ್ನನ್ನು ಕಂಡಾಗ-ಲೆಲ್ಲ ನನಗೆ ದುಃಖವೇ.
ಚಿಂತಿಸ ಬೇಡಿ, ಪ್ರಭು. ನನಗೆ ಅದರ ನಿವಾರಣೆಗೆ ಯೋಗ್ಯ ಉಪಾಯ ತಿಳಿದಿದೆ; ನಿಮಗೆ ನಾನು ಅದನ್ನು ಈ ತನಕ ತಿಳಿಸಿರ-ಲಿಲ್ಲ, ಅಷ್ಟೇ.


ಮಂತ್ರಬಲದಿಂದ ಕುಂತಿ, ಮಾದ್ರಿಯರಿಬ್ಬರೂ ಕೂಡಿ ಐವರು ಮಕ್ಕಳಿಗೆ ತಾಯಂದಿರಾದರು. ಅವರೇ ಪಂಚ ಪಾಂಡವರು.


ಪಾಂಡುರಾಜ ಗತಿಸುತ್ತಲೇ, ಮಾದ್ರಿ ಅವನ ಚಿತೆಯನ್ನೇರಿ ಪ್ರಾಣತ್ಯಾಗ ಮಾಡಿ
ಕುಂತಿ ತಮ್ಮ ಐವರು ಮಕ್ಕಳಾದ ಯುಧಿಷ್ಠಿರ (ಯಮಧರ್ಮನ ಮಗ), ಭೀಮ
(ವಾಯುವಿನ ಮಗ), ಅರ್ಜುನ (ಇಂದ್ರನ ಮಗ), ನಕುಲ, ಸಹದೇವರು (ಅಶ್ವಿ
ದೇವತೆಗಳ ಯಮಳ ಪುತ್ರರು) - ಇವರೊಡನೆ ಹಸ್ತಿನಪುರವನ್ನು ಸೇರಿದಳು.
ಹಿರಿಯರಾದ ಭೀಷ್ಮ, ವಿದುರರೇ, ತಂದೆಯನ್ನು ಕಳೆದುಕೊಂಡ ಈ ಪಾಂಡುಸುತರನ್ನು ನಿಮ್ಮ ರಕ್ಷಣೆಗೆ ಒಪ್ಪಿಸುತ್ತಿದ್ದೇನೆ.
ಈ ಪಾಂಡುಸುತರನು ಅವರ ಬಂಧುಗಳಾದ ಕೌರವರಂತೆಯೇ ಪಾಲಿಸುತ್ತೇವೆ.


ಆರಂಭದಿಂದಲೂ ಆ ಅಣ್ಣತಮ್ಮಂದಿ-ರೊಳಗೆ ಇನ್ನಿಲ್ಲದ ಕಟು ಸ್ಪರ್ಧೆ ಕಾಣಿಸಿತು. ಕೌರವ ಕುವರರಲ್ಲಿ ಹೆಚ್ಚಿನ ಅತೃಪ್ತಿ ಬೆಳೆಯಿತು.
ಈ ದಾಯಾದಿಗಳು ಬಂದು ನಮ್ಮ ಬದುಕಿನ ಸೊಗಸೇ ಕೆಟ್ಟಿತು.
ಆ ಭೀಮ ನನ್ನನ್ನು ಆಟದಲ್ಲೂ ಕಾಡುತ್ತಾನೆ, ಸ್ವಪ್ನದಲ್ಲೂ ಕಾಡುತ್ತಾನೆ.
ಆಗಾಗ ಹಸ್ತಿನಪುರಕ್ಕೆ ಬರುತ್ತಿದ್ದ ಕರ್ಣ ಇದನ್ನೆಲ್ಲ ನೋಡುತ್ತಿದ್ದ.
ಭೀಮನದು ತಪ್ಪುದಾರಿ. ದುರ್ಯೋಧನನ ಪಾಪವೇ!
ಶ್ರೇಷ್ಠ ಗುರುಗಳೆನಿಸಿದ ದ್ರೋಣಾಚಾ-ರ್ಯರು ಆ ಅರಸುಮಕ್ಕಳಿಗೆ ರಾಜೋಚಿತ ವಿದ್ಯೆಯನ್ನು ಕಲಿಸಿದರು.
ಬಿಲ್ವಿದ್ಯೆಯಲ್ಲಿ ಅರ್ಜುನನಿಗಿರುವ ಕೌಶಲ ನಮ್ಮೆಲ್ಲರನ್ನೂ ಮೀರಿಸುತ್ತಿದೆ. ಒಂದು ದಿನ ಈ ಕುವರರು ನಮ್ಮ ಮೇಲೂ ಆಳಬಹುದು
ಕರ್ಣನೂ ದ್ರೋಣರ ಶಿಷ್ಯನಾದ, ಆದರೆ –
ಇವರಿಗೆ ಅರ್ಜುನನ ಮೇಲೆ ಪಕ್ಷಪಾತ. ಅವನನ್ನು ಮೀರಿಸಲು ನನಗೆಂದೂ ಬಿಡಲಾರರು.


ಗುರುಗಳೇ, ಬ್ರಹ್ಮಾಸ್ತ್ರ ಬಿಡು-ವುದು ಹೇಗೆಂದು ಕಲಿಸುತ್ತೀರಾ?
ಬ್ರಹ್ಮಾಸ್ತ್ರ ಬ್ರಾಹ್ಮಣರಿಗೆ, ಉತ್ತಮ ಕ್ಷತ್ರಿಯರಿಗೆ ಮಾತ್ರ ಸಲ್ಲುವಂಥದು. ಸಾರಥಿಯ ಮಗನಾದ ನಿನಗೆ ಅದನ್ನು ಕಲಿಸುವಂತಿಲ್ಲ.
ಆ ಮಾತು ಕೇಳಿ ಕರ್ಣನಿಗೆ ಆಘಾತವಾಯಿತು.
ಪರಶುರಾಮರಿಗೆ ಕ್ಷತ್ರಿಯರು ಎಂದರೆ ದ್ವೇಷವಂತೆ. ಅಲ್ಲಿಗೆ ನಾನು ಬ್ರಾಹ್ಮಣ ವೇಷದಲ್ಲಿ ಹೋದರೆ ಖಂಡಿತ ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಬಹುದು.
ಆ ಮಹಾಋಷಿಯ ಆಶ್ರಮವನ್ನು ಸೇರುತ್ತಲೇ-
ಅಯ್ಯಾ, ನಾನೊಬ್ಬ ಬ್ರಾಹ್ಮಣ ವಟು. ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ.
ಬಾ ಮಗನೆ, ಕ್ಷತ್ರಿಯನಲ್ಲದ ಯಾವ ಯೋಗ್ಯ ತರುಣನಿಗೂ ನಾನು ಪಾಠ ಹೇಳಬಲ್ಲೆ.
ಕರ್ಣನಿಗೆ ಆಗ ಮೋಸಮಾಡದೆ ಬೇರೆ ದಾರಿಯಿರಲಿಲ್ಲ.
ಈ ಚುರುಕಿನ ಶಿಷ್ಯನನ್ನು ಕಂಡು ಪರಶುರಾಮರಿಗೂ ತುಂಬ ಪ್ರೀತಿ.
ಇನ್ನೀಗ ನೀನು ಅಸ್ತ್ರಗಳಲ್ಲೇ ಶ್ರೇಷ್ಠವಾದ ಬ್ರಹ್ಮಾಸ್ತ್ರ ಪ್ರಯೋಗ ಕಲಿಯಲು ತಕ್ಕವನು.


ಒಂದು ದಿವಸ ಪರಶುರಾಮರು ಶಿಷ್ಯ-
ರಾದ ಕರ್ಣನ ತೊಡೆಯ ಮೇಲೆ ತಲೆಯ-
ನ್ನಿರಿಸಿ ಮಲಗಿದ್ದರು.
ಅಬ್ಬ, ಈ ಕೀಟದ ಕಡಿತವೇ! ಇರಲಿ, ನಾನು ಎದ್ದೆನಾದರೆ ಗುರುಗಳ ನಿದ್ದೆಗೆ ಭಂಗ ಬಂದೀತು.
ಆ ಕೀಟವು ಕಡಿದು, ಗಾಯದಿಂದ ರಕ್ತ
ಸುರಿದರೂ ಕರ್ಣ ಒಂದಿಷ್ಟೂ ಅಲುಗಾಡಲಿಲ್ಲ.
ಆ ಋಷಿ ಎಚ್ಚತ್ತು,
ನೆತ್ತರನ್ನು ಕಾಣುತ್ತಲೇ -
ನೀನು ನನ್ನನ್ನು ಮೋಸಗೊಳಿಸಿದ್ದೀಯ. ಅಂಥ ನೋವನ್ನು ಸಹಿಸಿಯೂ ಸುಮ್ಮನಿರಬೇಕಾದರೆ ನೀನು ಕ್ಷತ್ರಿಯನೇ ಇರಬೇಕು. ಸತ್ಯವನ್ನು ಹೇಳು - ಯಾರು ನೀನು?
ರ್ಣ ಸತ್ಯವನ್ನು ತಿಳಿಸಲೇ ಬೇಕಾಯಿತು.
ನಾನು ಅಧಿರಥನ ಮಗ; ಆತ ಸಾರಥಿ, ಸೂತಪುತ್ರ. ಕ್ಷಮಿಸಬೇಕು, ಮಹಾನುಭಾವ.
ಕುಪಿತನಾದ ಆ ಋಷಿ ಶಾಪವನ್ನಿಟ್ಟ.
ಗುರುವನ್ನು ವಂಚಿಸಿದ ನಿನ್ನ ತಪ್ಪಿಗೆ - ನಿನ್ನ ವಿದ್ಯೆ ಆಪತ್ಕಾಲದಲ್ಲಿ ನಿನಗೆ ನೆರವಾಗದೆ ಹೋಗಲಿ.


ಇದರಿಂದ ಕರ್ಣ ಹತಾಶನಾದ. ತಾನೆಲ್ಲಿಗೆ ಹೋಗುತ್ತಿರುವೆನೆಂಬುದನ್ನು ತಿಳಿಯದೆ ಅಲ್ಲಿಂದ ಹೊರಟಿದ್ದ.
ಫಕ್ಕನೆ ಆ ದಾರಿಯಾಗಿ ಒಂದು ಮೃಗ ಹಾದು ಬಂದಿತು. ಆತ ಯೋಚಿಸದೆಯೆ ಅಂಬನ್ನೆಸೆದು ಅದನ್ನು ಕೊಂದುಬಿಟ್ಟ
ಆ ಮೃತ ಪ್ರಾಣಿಯ ಕಡೆಗೆ ಹೋಗುತ್ತಿರಲು -
ಒಬ್ಬ ಬ್ರಾಹ್ಮಣ ಅವನನ್ನು ಕಂಡು ಕೋಪದಿಂದ ಕೈಯೆತ್ತಿದ.
ಏ ಪಾಪಿ, ನೀನು ನನ್ನ ಬಡ ಹಸುವನ್ನು ಕೊಂದೆಯಲ್ಲ!


ರ್ಣ ಅವನಿಗೆ ತನ್ನ ಪಾಡನ್ನು ತಿಳಿಸುವ
ಮೊದಲೇ ಆತ ಅವನನ್ನು ಶಪಿಸಿದ.
ನನ್ನ ನಿಸ್ಸಹಾಯಕ
ಪಸುವನ್ನು ಕೊಂದಂತೆ,
ನೀನೂ ನಿಸ್ಸಹಾಯಕ
ಸ್ಥಿತಿಯಲ್ಲಿದ್ದಾಗ
ಕೊಲ್ಲಲ್ಪಡುವೆ.
ಖಿನ್ನನಾದ ಕರ್ಣ ಬೇರೆ ದಾರಿಗಾಣದೆ
ತನ್ನ ಮಮತೆಯ ತಾಯಿಯ ಬಳಿಗೆ
ಮರಳಿದ.
ನನ್ನ ಪಾಲಿಗೆ ವಿಧಿಯು
ಮುನಿಸುಗೊಂಡಿದೆ.
ಇನ್ನೇನೆಲ್ಲ ದೌರ್ಭಾಗ್ಯ
ನನಗಾಗಿ
ಕಾದಿದೆಯೋ !
ಆತ ಕೆಲವು ದಿನ ತಾಯಿಯ ಬಳಿಯಲ್ಲಿದ್ದ. ಒಂದು ದಿನ -
ಅಮ್ಮ,
ಹಸ್ತಿನಪುರದಲ್ಲಿ
ಒಂದು ಬಹಿರಂಗ
ಪಂದ್ಯ ನಡೆಯುವು-
ದಂತೆ. ನಾನೂ
ಹೋಗಿ ಸ್ಪರ್ಧಿಸಲೇ?
ಯೋಗ್ಯತೆಯಿದ್ದ
ಯೋದ್ಧನಿಗೆ
ಅಲ್ಲಾದರೂ
ಮನ್ನಣೆ
ದೊರಕೀತು.



ಕರ್ಣ ಕೇಳಿದ ಆ ವಾರ್ತೆ
ನಿಜವಾಗಿತ್ತು.
ನಿಮ್ಮ ನಿಮ್ಮ ಕೌಶಲಗಳನ್ನು ಒಂದು ಬಹಿರಂಗ ಪ್ರದರ್ಶನದಲ್ಲಿ ಮೆರೆಯಿಸಿರಿ.
ಕೌರವ ಹಿರಿಯರೊಡನೆ ಕೇಳಿ ಪ್ರದರ್ಶ
ದ ದಿನವನ್ನು ಗೊತ್ತುಪಡಿಸಲಾಯಿತು.
ಆ ಪಂದ್ಯದ ದಿನ ಅರ್ಜುನ ತನ್ನ ಅದ್ಭುತ ಕೌಶಲವನ್ನು ತೋ-
ರಿಸಿ ಎಲ್ಲರನ್ನೂ ಮೀರಿಸಿದ.


ಆಗ ಎಲ್ಲರ ದೃಷ್ಟಿಯೂ ಪ್ರವೇಶ ದ್ವಾರದ ಕಡೆಗೆ ತಿರುಗಿತು. ಅಲ್ಲಿಂದೊಬ್ಬ ಒಳಕ್ಕೆ ಕಾಲಿರಿಸಿದ. ಆತನೇ ಕರ್ಣ.
ಆತ ಅರ್ಜುನನ ಪ್ರಯೋಗಗ-ಳನ್ನೆಲ್ಲ ಮಾಡಿ ತೋರಿಸಿದ.
ಭಾಪುರೇ!
ಭಲೇ!


ದುರ್ಯೋಧನನಿಗೆ ಹಿಗ್ಗೋ ಹಿಗ್ಗು!
ಪರಾಕ್ರಮಿಯೇ, ನಿನಗೆ ಸುಸ್ವಾಗತ. ನಮ್ಮ ಅದೃಷ್ಟದಿಂದಾಗಿ ನೀನು ಬಂದಿದ್ದೀಯಾ. ನಿನಗೇನನ್ನು ಕೊಡಲಿ?
ದುರ್ಯೋಧನನ ಈ ಸ್ವಾಗತದಿಂದ ಕರ್ಣನ ಹೃದಯ ತುಂಬಿ ಬಂದಿತು
ದೊರೆಯೇ, ನನಗೆ ನಿನ್ನ ಪ್ರೀತಿಯೊಂದಿದ್ದರೆ ಸಾಕು. ನನ್ನ ಒಂದೇ ಒಂದು ಅಪೇಕ್ಷೆಯೆಂದರೆ- ದ್ರೋಣಾ-ರ ಈ ಮುದ್ದಿನ ಶಿಷ್ಯ ಅರ್ಜುನನೊಡನೆ ಒಂಟಿ-ಯಾಗಿ ಸೆಣಸಬೇಕೆಂದು.
ಆಗಲಂತೆ
ಅತ್ತ ಅರ್ಜುನ ಅದಕ್ಕೆ ಸಿದ್ಧನಾಗುತ್ತಿದ್ದಾಗ, ಕೌರವರಲ್ಲಿ ಆಚಾರ್ಯನಾಗಿದ್ದ ಕೃಪನು ಮುಂದೆ ಬಂದ.
ಯಾರಯ್ಯ ನೀನು? ನಿನ್ನ ತಂದೆ ತಾಯಿಗಳಾರು? ನಮ್ಮ ರಾಜ-ಕುವರ ತನ್ನ ಸಮ ಕುಲ, ಸಮ ಸ್ಥಾನದವರೊಡನೆ ಮಾತ್ರ ಕಾದುವನು.
ನನ್ನ ಭಾಗ್ಯ ಕ್ಷಣಿಕವಾಯಿತು. ಇವನನ್ನು ಉತ್ತರಿಸುವುದಾ-ದರೂ ಹೇಗೆ? ಅಯ್ಯೋ, ನನ್ನನ್ನು ಶಿಶುವಿದ್ದಾಗ ಕೈಬಿಟ್ಟು ಅಗಲಿದ ಕಠಿಣ ತಾಯಿಯೇ, ನಾನ್ಯಾರೆಂದು ತಿಳಿಸುತ್ತೀಯಾ?



ಷ್ಣನು ಕರ್ಣನಿದ್ದಲ್ಲಿಗೆ ಹೋಗಿ ಆತನ ನ್ಮವಾರ್ತೆಯನ್ನು ತಿಳಿಸಿದ. ಅದನ್ನು ಹೇಳಿ ಮುಗಿಸುತ್ತ-
ಬಾ ನನ್ನ ಜತೆಗೆ, ನಿನ್ನನ್ನು ಚಕ್ರವರ್ತಿಯನ್ನಾಗಿ ಮಾಡುವೆ. ಐವರು ಬಲಿಷ್ಠ ಬಂಧುಗಳು ನಿನ್ನ ಬೆಂಬಲಕ್ಕಿದ್ದಾರೆ. ನಿನಗಾಗಿ ಹಂಬಲಿಸುವ ತಾಯಿಯನ್ನೂ ನೀನು ಪಡೆಯುತ್ತೀಯಾ.
ಆಗ ಕರ್ಣನ ಸಂಕಟ ಹೇಳತೀರದು.
ನನಗೆ ಬೇಕಾದುದು ದುರ್ಯೋಧನನ ಸ್ನೇಹವೊಂದೇ. ನಿನಗೆ ನನ್ನಲ್ಲಿ ಅಭಿಮಾನವಿರುವುದಾದರೆ ನಾನು ಸಾಯುವ ತನಕವೂ ನನ್ನ ಜನ್ಮವಾರ್ತೆಯನ್ನು ರಹಸ್ಯವಾಗಿ ಇರಿಸುವೆಯಾ?
ಆಗಲಿ.
ಕೃಷ್ಣನ ಸಂಧಾನ ಪ್ರಯತ್ನ ಸಫಲವಾಗಲಿಲ್ಲ ಎಂಬುದನ್ನು ತಿಳಿದು ಕುಂತಿಗೆ ದುಃಖವಾಯಿತು.
ನಾನೇ ಕರ್ಣನಿಗೆ ಅವನ್ಯಾರೆಂದು ತಿಳಿಸಬೇಕು. ಹೇಗಾದರೂ ಈ ಯುದ್ಧವನ್ನು ತಪ್ಪಿಸಬೇಕು.
ಕರ್ಣ ಮಧ್ಯಾಹ್ನದ ಆಹ್ನಿಕವನ್ನು ಮಾಡುತ್ತಿರುವ ಹೊತ್ತಿಗೆ ಆಕೆ ಅಲ್ಲಿಗೆ ಹೋದಳು.
ನನ್ನ ತಾಯಿ! ಅದೂ ಇಲ್ಲಿ! ಅವಳಿಗೇನು ಬೇಕಾಗಿದೆಯೋ
ಓ ರಾಜ್ಞಿ, ನಿನಗೆ ನನ್ನಿಂದ ಏನಾಗಬೇಕು?


ಅವಳೂ ಅವನಿಗೆ ಅವನ ಜನ್ಮದ
ಸುದ್ದಿಯನ್ನು ತಿಳಿಸಿ, ತಮ್ಮಂದಿರೊಡನೆ
ಯುದ್ಧ ಬೇಡವೆಂದು
ಅಂಗಲಾಚಿದಳು.
ನೋಡು, ನಿನ್ನ
ತಂದೆಯಾದ ಆ
ಸೂರ್ಯದೇವನೂ
ನನ್ನ ಅಪೇಕ್ಷೆಯನ್ನು
ಸಮರ್ಥಿಸುತ್ತಿದ್ದಾನೆ.
ಅಮ್ಮ,
ನಾನು ನನ್ನ
ಧರ್ಮವನ್ನು
ಬಿಟ್ಟು ನಡೆಯ-
ಬೇಕು ಎನ್ನು-
ತ್ತೀಯಾ?
ಆದರೂ ಆತ ತಾಯಿಯ ಬೇಡಿ-
ಕೆಯನ್ನು ಅಲ್ಲಗಳೆಯಲಾರ.
ಅಮ್ಮಾ, ನನ್ನೀ ತಮ್ಮಂದಿ-
ರೊಡನೆ ಯುದ್ಧ ತಪ್ಪಿದ್ದಲ್ಲ.
ಆದರೂ ಒಂದು ಮಾತ್ರ ನಿಜ,
ಅರ್ಜುನನನ್ನು ಹೊರತು
ಯಾವ ಬಂಧುವನ್ನೂ ಕೊಲ್ಲು-
ವುದಿಲ್ಲ. ಆಗ ನಿನ್ನ ಐದು
ಮಂದಿ ಮಕ್ಕಳೂ ಮತ್ತು
ನನ್ನ ಮಾನವೂ ಉಳಿದಂತೆ.
ಕರ್ಣನನ್ನು ಹರಸಿ, ಕುಂತಿ ಎದೆಗುದಿ-
ಯಿಂದ ಮನೆಗೆ ಮರಳಿದಳು.
ಭೀಷ್ಮರು ಕೌರವ ಪಡೆಯ ನಾಯಕ
ಎಂದು ಕೇಳಿ ತಿಳಿದ ಕರ್ಣ ದುರ್ಯೋ
ನನೆಡೆಗೆ ಧಾವಿಸಿದ.
ಆ ಭೀಷ್ಮರಿಗೆ ನಾನೆಂದರಾಗದು.
ಅವರಿಂದ ನಾನು ಆಜ್ಞೆ
ಪಡೆಯಲಾರೆ. ಅವರು
ಬಿದ್ದ ಮೇಲೆಯೇ
ನಾನು ರಣರಂಗಕ್ಕೆ
ಕಾಲಿಡುವವನು!


ಅಂತೂ ಕುರುಕ್ಷೇತ್ರದ ಯುದ್ಧ ನಡೆದೇ ಬಿಟ್ಟಿತು. ಹದಿನೆಂಟು ದಿನಗಳ ಆ ಯುದ್ಧದಲ್ಲಿ, ಉಭಯ ಸೇನೆಗಳಲ್ಲೂ ಅನೇಕ ಪರಾಕ್ರಮಿಗಳು ಮಡಿದರು. ಹತ್ತನೆಯ ದಿವಸ ವೃದ್ಧ ಸೇನಾನಿ ಭೀಷ್ಮಾಚಾರ್ಯರು ಅಂಬಿನ ಹಾಸುಗೆಯ ಮೇಲೆ ಮಲಗುವಂತಾಯಿತು. ಎಂದಿನಿಂದಲೂ ಅವರ ವಿಶ್ವಾಸಕ್ಕಾಗಿ ಕಾದಿದ್ದ ಕರ್ಣನು ಗಾಯಗೊಂಡ ಅವರಿದ್ದಲ್ಲಿಗೆ ಧಾವಿಸಿ ಹೋದ.
ಅಜ್ಜಾ, ನಿಮ್ಮ ಪ್ರೀತಿಯನ್ನು ಪಡೆಯುವ ಭಾಗ್ಯ ನನಗೆ ಇಲ್ಲದೇ ಹೋಯಿತು. ಆದರೂ ಈ ಗಳಿಗೆಯಲ್ಲಿ ನಿಮಗೆ ಗೌರವ ಸಲ್ಲಿಸುವುದಕ್ಕೆ, ನಿಮ್ಮ ಆಶೀರ್ವಾದ ಪಡೆಯುವುದಕ್ಕೆ ಬಂದಿದ್ದೇನೆ.


ಪ್ರಿಯ ಕರ್ಣ, ನಿನ್ನನ್ನು ನಾನರಿಯೆನೇ? ದುರ್ಯೋಧನನ ಮೇಲಿನ ನಿಷ್ಠೆಯೇ ನಿನ್ನ ಧರ್ಮವಾಗಿದೆ. ನಿನ್ನಿಂದ ಅವನಿಗೆ ಜಯ ಬರಲಿ. ಹೋಗು, ಆ ನಿನ್ನ ಹಗೆಗಳೊಡನೆ ಕಾದಾಡು.
ಅವಸರದ ಸಭೆ ಸೇರಿ ದ್ರೋಣಾಚಾರ್ಯರು ಸೇನಾನಿ ಪಟ್ಟ ವಹಿಸಬೇಕೆಂದು ತೀರ್ಮಾನವಾಯಿತು.
ನೀನು ನಮ್ಮನ್ನು ಮುನ್ನಡೆಯಿಸುವೆ ಎಂದು ನಾನು ಯೋಚಿಸಿದ್ದೆ, ಕರ್ಣ.
ದ್ರೋಣರು ಮುಂದಾಳಾಗುವು ಉಚಿತ. ಈ ಪರಿಸ್ಥಿತಿಯಲ್ಲಿ ನಮ್ಮ ನಮ್ಮೊಳಗೆ ಅಸೂಯೆ ಸಲ್ಲದು.


ೀಗೆ ಕಾಳಗ ಅಬ್ಬರದಿಂದ ಸಾಗಿತು. ಹದಿನಾಲ್ಕನೆಯ ದಿನ ಕರ್ಣ ಭೀಮನನ್ನು
ದಿರಿಸಿದ. ಅವನನ್ನು ಕೊಲ್ಲುವುದು ಆತನಿಗೆ ನಿಮಿಷದ ಕೆಲಸ. ಆದರೆ -
ದುರ್ಯೋಧನ, ಕ್ಷಮೆ ಇರಲಿ. ಭೀಮನು ನನ್ನ ಕೈಗೆ ಸಿಕ್ಕಿದ್ದಾನೆ. ಆದರೆ ನಾನು ನನ್ನ ತಾಯಿಗೆ ಕೊಟ್ಟ ಮಾತಿನಿಂದಾಗಿ ಅವನನ್ನು ಕೊಲ್ಲಲಾರೆ. ಜೊತೆಗೆ, ಅವನ ರಕ್ಷಣೆಗೆ ಅರ್ಜುನ ಬರುತ್ತಿದ್ದಾನೆ.
ದಿನ ಕತ್ತಲು ಹರಿದ ಬಳಿಕವೂ ಯುದ್ಧ ಮುಂದುವರಿಯಿತು. ಅದು, ಭೀಮನ ಮಗ
ಟೋತ್ಕಚ ಮತ್ತು ಅವನ ರಕ್ಕಸ ಪಡೆಗೆ ಇನ್ನಷ್ಟು ಅನುಕೂಲವಾಯಿತು. ರಾಕ್ಷಸರಿಗೆ ಕತ್ತಲಲ್ಲೇ ಬಲ.
ಕರ್ಣ, ಅವನನ್ನು ಥಟ್ಟನೇ ಕೊಲ್ಲು. ಇಲ್ಲವಾದರೆ ನಮ್ಮ ಯಾವತ್ತೂ, ಸೇನೆ ಅವನಿಂದ ನಾಶವಾಗುತ್ತದೆ.


ದುರ್ದೈವಿಯಾದ ಕರ್ಣ, ಅಂದಿನ ಯುದ್ಧದ ರಭಸದಲ್ಲಿ ಮೈಮರೆತು ಇಂದ್ರನು ವರವಾ
ಕೊಟ್ಟ ಅಜೇಯವಾದ ಆ 'ಶಕ್ತಿ' ಅಸ್ತ್ರವನ್ನು ಹೊರತೆಗೆದ.
ಸುದೈವಿ ಅರ್ಜುನನ್ನ ಮೇಲೆ ದೇವರು ಮತ್ತೊಮ್ಮೆ ಕೃಪೆದೋರಿದಂತಾಯಿತು.
ಅಯ್ಯೋ, ಘಟೋತ್ಕಚ-
ನನ್ನು ಕೊಂದದ್ದಂತೂ
ನಿಜ. ಆದರೆ ಅರ್ಜುನ-
ನಿಗಾಗಿ ಕಾದಿರಿಸಿದ
ಪರಮಾಸ್ತ್ರವೊಂದನ್ನು
ನಾನು ಕಳೆದು-
ಕೊಂಡೆನಲ್ಲ!


ನೈದನೆಯ ದಿವಸ
ರೋಣರು ಯುದ್ಧದಲ್ಲಿ
ಡಿದ್ದರು. ಕೌರವ
ರರೆಲ್ಲರೂ
ರ್ಣನೇ ಸೇನಾನಿ
ಗಬೇಕೆಂದು
ಯಸಿದರು.
ಅಜೇಯನಾದ ಕರ್ಣ ನಮ್ಮ ಸೇನಾನಿ ಈಗ!
ರ್ಯೋಧನನಿಗೆ ಪರಮಾನಂದ.
ರ್ಣ, ನಿನಗೆ
ಂಡವರ ಮೇಲೆ
ಕ್ಷೆಟ್ಟೋ ಹಾಗೆ.
ಗಲಾದರ
ುಗೆ ಜಯ
ಂಡಿತ.
ಮೆಚ್ಚಿನ ದೊರೆಯ ಉಪ-
ರ ತೀರಿಸುವ ಪ್ರಸಂಗ ಬಂದೊ-
ದ್ದಕ್ಕಾಗಿ ಕರ್ಣನಿಗೆ ಸಂತೋಷ.
ನನ್ನ ದೊರೆಯೇ, ಗೆಲುವಿನ ದಾರಿಯಲ್ಲಿ ನಮ್ಮ ಪಡೆಯನ್ನು ನಡೆಸುವೆ. ಅರ್ಜುನ-ನಿಗೆ ನನ್ನ ಕೈಯಿಂ-ದಲೇ ಮೃತ್ಯು.



ಹೀಗೆ ಕರ್ಣ ಕೌರವ ಬಲದ ಸೇನಾನಿಯಾದ. ಆ ದಿನ ನಕುಲ ಅವನ ಕೈಗೆ ಸಿಕ್ಕಿದ. ಆದರೆ-
ಮಗು, ಕರ್ಣನೊಡನೆ ದ್ವಂದ್ವ ನಡೆಸುವ ಅವಕಾಶ ಸಿಕ್ಕಿತೆಂದು ಹಿಗ್ಗು. ಇರಲಿ, ಅರ್ಜುನನ ಬಳಿಗೆ ಹೋಗಿ ಜೀವ ಉಳಿಸಿಕೋ.
ಎಂಥ ಅಪಮಾನ! ಇದಕ್ಕಿಂ ಮರಣವೇ ಒಳಿತು.
ಇನ್ನೊಂದು ದಿವಸ ಕಳೆಯಿತು. ಅರ್ಜುನ ಮಾತ್ರ ಬದುಕಿಯೇ ಇದ್ದಾನೆ.
ಆತ ಉಳಿದಿರುವುದೆಂಬುದು ಸಾರಥಿಯಾದ ಕೃಷ್ಣನ ಚಮ ದಿಂದ ಮಾತ್ರ. ನೀನು ಶಲ್ಯನಿ ಹೇಳಿ, ನನಗೆ ತಕ್ಕ ಸಾರಥ ಒದಗಿಸಿದೆಯಾದರೆ ಗೆಲು ನಮಗೇನೆ.
ಹಾಗೆಯೇ ಆಗಲಿ.


ಯೋರ್ಧನನನ್ನು ಅಲ್ಲಿ
ಟ್ಟು ಕರ್ಣ ತನ್ನ ಡೇರೆಗೆ
ೋದ. ಅಲ್ಲಿ ಬಿಚ್ಚತ್ತುಕೊಂಡೇ
ನಾಳೆಯಾದರೂ ಸರ್ವಪ್ರಯತ್ನ-
ದಿಂದ ನಾನು ಅರ್ಜುನನನ್ನು
ಮುಗಿಸಬೇಕು. ಆದರೆ ಅದು
ಸಾಧ್ಯವೇ?
ದೇ ಚಿಂತೆಯಿಂದ ಹಾಸುಗೆಯಲ್ಲಿ
ಳಲಾಡಿದ; ನಿದ್ರೆಯೇ ಬರಲಿಲ್ಲ.
ನಾಳೆ ದಿನ
ಯುಧಿಷ್ಠಿರನೊಡ-
ಯೂ ಕಾಳಗವಾಡ-
ೇಕು. ತಾಯಿ ಕುಂತಿಗೆ
ಾನು ಸತ್ಯನಿಷ್ಠ
ೆಂಬುದು ಮನವ-
ಕೆಯಾಗಬೇಕು.
ಅವಳ ಪ್ರೀತಿಗಾಗಿ, ಸ್ವೀಕಾರಕ್ಕಾಗಿ
ನಾನೆಷ್ಟು ಹಂಬಲಿಸಿಲ್ಲ!
ಅದನ್ನು ನೆನೆದಾಗಲೆಲ್ಲ
ತಾಯಿ ರಾಧೆಯ ಮತ್ತು
ದುರ್ಯೋಧನನ ಅಮಿತ
ಪ್ರೇಮವನ್ನು ಮರೆಯಲಾರೆ.
ಆ ಕೊನೆಯ ವಿಚಾರಸರಣಿ ಅವನನ್ನು
ನಿದ್ರೆಯಲ್ಲಿ ಓಲಾಡಿಸಿತು.


ಮರುದಿನ ಕರ್ಣನ ಬಯಕೆ ಕೈಗೂಡಿತು. ಅದು ಯುಧಿಷ್ಠಿರನೊಡನೆ ದ್ವಂದ್ವಯುದ್ಧ ಹೂಡುವ ಪ್ರಸಂಗ.
ಈ ಸೇಡನ್ನು ಅರ್ಜುನನೆ ತೀರಿಸುತ್ತಾನೆ.
ಯುಧಿಷ್ಠಿರ, ಜೀವವನ್ನು ಉಳಿ ತ್ತೇನೆ. ದ್ವಂದ್ವದ ನೀನು ನನಗೆ ಸ ಆಗಲಾರೆ. ಅದಕ ತಕ್ಕ ಶಕ್ತರನ್ನು ಕಳುಹಿಸು.
ಅರ್ಜುನನ ಕಿವಿಗೆ ಅಣ್ಣ ಯುಧಿಷ್ಠಿರನ ಸೋಲಿನ ವಾರ್ತೆ ಮುಟ್ಟುತ್ತಲೇ ಕಾಯುವ ತಾಳ್ಮೆ ಉಳಿಯಲಿಲ್ಲ. ಅದಕ್ಕೆ ಸರಿಯಾಗಿ ಸಂದರ್ಭವೂ ಒದಗಿತು.
ಈ ನನ್ನ ತಮ್ಮನ ಆಯುಧ ಕೌಶಲವೆಷ್ಟು!
ಕಾದುವುದರಲ್ಲಿ ಈತ ನಿಸ್ಸೀಮ. ಅಂಥವ ಸಾರಥಿಯ ಮಗನೆಂ ರೆ ನಂಬುವುದು ಕಷ್ಟ.


ಅಯ್ಯೋ, ಕರ್ಣನ ರಥದ ಗಾಲಿ ಕೂತುಹೋಗಿ ಅವನ ಅವಸಾನವೇ ಸಮೀಪಿಸಿತು.
ಒಂದಿಷ್ಟೂ ನೆನಪಾಗ-ದಲ್ಲ, ಪರಶುರಾಮರು ಕಲಿಸಿದ ಮಂತ್ರಗಳೊಂದೂ ಸ್ಮರಣೆಗೆ ಬಾರವಲ್ಲ!
ನೆಲಕ್ಕೆ ಧುಮುಕಿ ಹೂತ ದ ಗಾಲಿಯನ್ನು ಎತ್ತಲು ಯತ್ನಿಸುತ್ತಿದ್ದಾಗ ಅರ್ಜುನ- ಅನುಕೂಲವಾಯಿತು. ಶುರಾಮರ ಶಾಪ ಸಿದ್ಧಿಸಿತು.



ಕರ್ಣನು ನಿಸ್ಸಹಾಯನಾಗಿದ್ದ ವೇಳೆಯನ್ನು ಕಂಡು ಕೃಷ್ಣ ಅರ್ಜುನನನ್ನು ಪ್ರೇರಿಸಿದ.
ಆತ ಎಸೆದೊಂದು ಅಂಬು ಆ ಮಹಾಪರಾಕ್ರಮಿಯ ದೇಹದಿಂದ ಅವನ ರುಂಡವನ್ನು ಬೇರ್ಪಡಿಸಿತು.
ಆ ವಿಪ್ರನ ಶಾಪವೂ ನಿಜವಾಯಿತು.


ತಿ ಕರ್ಣನ ಮೃತ್ಯುವಾರ್ತೆಯನ್ನು
ಳಿದವಳೇ -
ಅಯ್ಯೋ ಮಗನೇ,
ಶೈಶವದಲ್ಲಿ ನಿನ್ನನ್ನು ಎಸೆದ
ನಾನು, ನಿನ್ನ ಮೃತ್ಯುವಿಗಾಗಿ
ಹೀಗೆ ರಹಸ್ಯವಾಗಿ
ಅಳಬೇಕಾಯಿತೇ?
ಕದನ ಮುಗಿಯಿತು. ಪಾಂಡವರು
ಗೆದ್ದರು. ಮೃತರಾದವರ ಅಂತ್ಯ ಕ್ರಿಯೆ-
ಗಳನ್ನು ಜರುಗಿಸಿದರು.
ನಿನ್ನ ಜನ್ಮಕ್ಕೆ ಉಚಿತ-
ವಾದ ರೀತಿಯಲ್ಲಿ ನಿನ್ನ
ಆತ್ಮಕ್ಕೆ ಸದ್ಗತಿಯನ್ನು
ಕೊಡಿಸಬಲ್ಲ
ಧೈರ್ಯ ನನಗೆ
ಬಂದೀತೇ?
ಧಿಷ್ಠಿರನು, ಗತಿಸಿದ ತನ್ನ ಬಾಂಧವ-
ಲ್ಲಿ ತೀರ ಕೊನೆಯಾತನಿಗೆ ತಿಲ ತರ್ಪಣ
ಸಲ್ಲಿಸುತ್ತಿರುವಾಗ -
ಮಗು, ತಡೆ.
ಇನ್ನೊಬ್ಬ ಉಳಿ-
ದಿದ್ದಾನೆ.
ಅಮ್ಮ, ನಾನು
ಯಾರನ್ನು
ಮರೆತುಬಿಟ್ಟೆ?
ಕರ್ಣನನ್ನು!
ಕರ್ಣ!
ಆ ಸೂತಪುತ್ರ!
ಅವನಿಗೂ ನಮಗೂ
ಏನು ನಂಟು?
ಆತ ನಮ್ಮ
ಪರಮ ವೈರಿ.


ಕುಂತಿ ಆ ಗಳಿಗೆಯಲ್ಲಿ ಗದ್ಗದ ಕಂಠದಿಂದ ತನ್ನ ದಾರುಣ ಕತೆಯನ್ನು ತಿಳಿಸಿದಳು.
ಸೂರ್ಯದೇವ ಹಸನ್ಮುಖಿ ಪ್ರತಿಯೊಬ್ಬ ಪಾಂಡವನೂ ಆ ಮೃತ ಸೋದರನೊ ಕಾದಾಡಿದುದನ್ನು ನೆನೆದು ಪ್ರೀತ್ಯಾದರಗಳನ್ನು ಸಲ್ಲಿ
ಅಂತು, ಕರ್ಣನ ಪಾಲಿಗೆ ಬದುಕಿನಲ್ಲಿ ಸಿಗದೇ ಹೋದ ಪ್ರೀತಿ, ಮನ್ನಣೆ, ಕೀರ್ತಿ ಮೊದಲಾದುವನ್ನು ಮರಣಾನಂತರ ಪಡೆಯುವಂತಾಯಿತು. ಅಂಥ ಪಾಡು ಲೋಕದಲ್ಲಿ ಅನೇಕರಿಗೆ ಒದಗಿ ಬರುವುದಲ್ಲವೆ.

ಪ್ರಶ್ನೆಗಳು

1 ಕರ್ಣನು ಹೇಗೆ ಜನಿಸಿದನು?
2 ಕರ್ಣನನ್ನು ಯಾರು ಬೆಳೆಸಿದರು ಮತ್ತು ಏಕೆ?
3 ಕರ್ಣನು ಪರಶುರಾಮನ ಕಡೆಗೆ ಏಕೆ ಹೋದನು?
4 ಪರಶುರಾಮನಿಗೆ ಕರ್ಣನು ಕ್ಷತ್ರಿಯನೆಂಬುದು ಹೇಗೆ ಗೊತ್ತಾಯಿತು?
5 ಕರ್ಣನಿಗೆ ಬ್ರಾಹ್ಮಣನು ಕೊಟ್ಟ ಶಾಪವೇನು?
6 ದುರ್ಯೋಧನನು ಕರ್ಣನಿಗೆ ಮಾಡಿದ ಉಪಕಾರ ಯಾವುದು?
7 ಕರ್ಣನು ಇಂದ್ರನಿಗೆ ಕವಚ ಕುಂಡಲಗಳನ್ನು ಏಕೆ ದಾನ ಮಾಡಿದನು?
8 ಕರ್ಣನು ಕುಂತಿಗೆ ಯಾವ ವಚನವಿತ್ತನು?
9 ವಿಪ್ರನ ಶಾಪವು ಹೇಗೆ ನಿಜವಾಯಿತು?

ಅಧಿಕೃತ ಮಾರಾಟಗಾರರು: ಇಂಡಿಯಾ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು-9



ಸರಿಯಾಗಿ ಬರೆಯಲು ಒಂಭತ್ತು ರೀತಿಗಳು.
ಫ್ಲೀಟ್-ರೈಟ್
ಬಫ್-ಮಾಡೆಲ್
ಡಿ-ಮಾಡೆಲ್
ಎಮ್-ಮಾಡೆಲ್
ಎಚ್-ಮಾಡೆಲ್
ಎ-ಮಾಡೆ
ಮತ್ತು, ಮರೆಯಬೇಡಿರಿ... ಫ್ಲೀಟ್ ಫೌಂಟನ್ ಪೆನ್‌ಗಳನ್ನೂ ತಯಾರಿಸುತ್ತದೆ.
33-ಮಾಡೆಲ್
11-ಮಾ
ಫ್ಲೀಟ್ ಬಾಲ್ ಪೆನ್‌ಗಳು ಮತ್ತು ರಿಫಿಲ್‌ಗಳು ಬೇರೆ ಎಲ್ಲವೂ ಕೊನೆಗೊಂಡಮೇಲ
ಹೆಚ್ಚು ಸಮಯ ಬರೆಯುತ್ತಿರುತ್ತವೆ. ಹೆಚ್ಚು ಶಬ್ದಗಳು...ಉತ್ತಮತರದ ಶಾಯಿ...ಫ್ಲೀ
Fleet
ವಟುಮಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್.
"ಡೆಲ್‌ಸ್ಟಾರ್", ಹ್ಯೂಜಸ್ ರೋಡ್, ಬೊಂಬಾಯಿ-26.
ಪೆನ್‌ಗಳು · ಬಾಲ್ ಪೆನ್‌ಗಳು · ರಿಫಿಲ್‌ಗ

ವಿಕ್ರಮಾದಿತ್ಯ

ರೂ. 1.50

ಕನ್ನಡ ರೂಪಾಂತರ

ಡಾ॥ ಕೆ. ಶಿವರಾಮ ಕಾರಂತ.



ಚಂದ್ರಗುಪ್ತ ವಿಕ್ರಮಾದಿತ್ಯನು (ಸಮುದ್ರಗುಪ್ತನ ಮಗ) ಭಾರತದ ಇತಿಹಾಸದಲ್ಲಿಯ ಪ್ರಖ್ಯಾತ ಹಾಗೂ ಸುಪರಿಚಿತ ಪುರುಷರಲ್ಲಿ ಒಬ್ಬನಾಗಿದ್ದಾನೆ. (ಕಾಲ, ಕ್ರಿ.ಶ. 380-413). ಅವನ ಶೌರ್ಯ, ಧೈರ್ಯ, ನ್ಯಾಯ ದೃಷ್ಟಿ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ಶಕರನ್ನು ಪಶ್ಚಿಮ ಭಾರತ ದಿಂದ ಹೊಡೆದೋಡಿಸಲು ಕಾರಣವಾದ ಅವನ ಉಜ್ವಲ ದೇಶಪ್ರೇಮ ಮುಂತಾದ ಗುಣಗಳನ್ನು ಇಂದಿಗೂ ಸ್ಮರಿಸುವುದುಂಟು.

ಈ ಪುಸ್ತಕದಲ್ಲಿ ಕಥಿತವಾದ ಘಟನೆಗಳು ವಿಶಾಖ ದತ್ತನ 'ದೇವೀ ಚಂದ್ರಗುಪ್ತ'ವೆಂಬ ಗ್ರಂಥದ ಮೇಲೆ ಆಧಾರಿತವಾಗಿವೆ. ಆ ಗ್ರಂಥವು ಇಂದು ಲಭ್ಯವಿಲ್ಲ, ಆದರೆ ಅದರ ಕೆಲವು ಭಾಗಗಳು ಇತರ ಕೃತಿಗಳಲ್ಲಿ ಉಲ್ಲೇಖ ಗೊಂಡಿವೆ. ಆ ಉಲ್ಲೇಖಗಳು ಚಂದ್ರಗುಪ್ತನ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ, ಬೇರೆ ಕಾವ್ಯ-ನಾಟಕ ಗಳಲ್ಲಿಯೂ, ಶಾಸನಗಳಲ್ಲಿಯೂ ಚಂದ್ರಗುಪ್ತನ ಜೀವನ ಘಟನೆಗಳ ಪ್ರಸ್ತಾಪ ಅಲ್ಲಲ್ಲಿ ದೊರೆಯುತ್ತವೆ.

ಚಂದ್ರಗುಪ್ತ ವಿಕ್ರಮಾದಿತ್ಯನ ಆಳ್ವಿಕೆಯು ಬಂಗಾಲ ಕೊಲ್ಲಿಯಿಂದ ಅರಬ್ಬೀ ಸಮುದ್ರದ ವರೆಗೆ, ಹಾಗೂ ಹಿಮಾಲಯದಿಂದ ವಿಂಧ್ಯದ ವರೆಗೆ ಹಬ್ಬಿದ ವಿಶಾಲ ಪ್ರದೇಶಕ್ಕೆ ಶಾಂತಿ, ಸಮೃದ್ಧಿಗಳನ್ನು ನೀಡಿತು. ಭಾರತೀಯರ ಹೃದಯದಲ್ಲಿ ಚಂದ್ರಗುಪ್ತ ವಿಕ್ರಮಾದಿತ್ಯನು ಚಿರಸ್ಥಾನವನ್ನು ಪಡೆಯಲು ಇದೇ ಕಾರಣವಾಗಿರಬೇಕು.

ಫಾ-ಹಿಯೆನ್ ಎಂಬ ಚೀನೀ ಯಾತ್ರಿಕನು ಈತನ ಕಾಲದಲ್ಲಿಯೇ ಭಾರತದಲ್ಲಿ ಸಂಚರಿಸಿ (ಕ್ರಿ.ಶ. 400-411) ಈ ದೇಶ ಹಾಗೂ ಇಲ್ಲಿಯ ಜನತೆಯ ಜೀವನವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾನೆ.

Printed by H. K. Nasta at IBH Printers, Marol Naka, Mathuradas Vissanji Road, Andheri East, Bombay 59. Published by IBH Prakashana, Gandhinagar, Bangalore-9.

Editor: Anant Pai   Retold by: Anand Prakash Singh   Artwork: H. S. Chavan

ವಿಕ್ರಮಾದಿತ್ಯ



ಸುಮಾರು 1600 ವರ್ಷಗಳ ಹಿಂದೆ ಭಾರತದ ಬಹುಭಾಗವನ್ನು ಸಮುದ್ರಗುಪ್ತ
ಎಂಬ ಒಬ್ಬ ಶ್ರೇಷ್ಠ ದೊರೆ ಆಳುತ್ತಿದ್ದ. ಆತನ ರಾಜಧಾನಿ ಪಾಟಲಿ ಪುತ್ರ ಎಂಬ
ನಗರವಾಗಿತ್ತು. ಅವನಿಗೆ ರಾಮಗುಪ್ತ, ಚಂದ್ರಗುಪ್ತರೆಂಬ ಇಬ್ಬರು ಗಂಡು
ಮಕ್ಕಳಿದ್ದರು.


ಆ ಮಕ್ಕಳಿಗೆ, ಅವರ ತಂದೆಯ, ಮಂತ್ರಿ ಮತ್ತು ಅಧಿಕಾರಿಗಳ ಮಕ್ಕಳೆಲ್ಲ ಆಟದ ಗೆಳೆಯರು. ಒಂದು ದಿನ-
ಪ್ರಸೇನ, ಆಡಲು ನದಿ ದಂಡೆಗೆ ಹೋಗೋಣವೇ!
ಅದಾದರೆ ತುಂಬ ಚಂದ!
ನದಿ ದಡದ ಕಾಡು ಮೃಗ ಹಾವಳಿಯಂ ಮೊದಲು ತಂದೆಯನ ಕೇಳುವ.
ಅವರು ತಮ್ಮ ತಂದೆಯ ಬಳಿಗೆ ಹೋದರು.
ನಾವು ವಿಹಾರಕ್ಕೆ ನದಿ ದಂಡೆಗೆ ಹೋಗೋಣವೇ?
ಆಗಬಹುದಲ್ಲ. ಅಲ್ಲಿ ಏತರ ಭಯವೂ ಇಲ್ಲ.


ಗೆ ನದಿ ದಂಡೆಯಲ್ಲಿ ಅವರು ಆಡುತ್ತಿದ್ದಾಗ -
ಅಯ್ಯೋ ಚಂದ್ರಗುಪ್ತ, ಓಡು, ಓಡು; ಆ ಸಿಂಹ ನಿನ್ನ ಕಡೆಗೇ ಬರುತ್ತಿದೆ.
ಚಂದ್ರಗುಪ್ತ, ಓಡು, ಓಡು.
ವರೆ ಚಂದ್ರಗುಪ್ತ ನಿಂತಲ್ಲಿಂದ ದಲಲಿಲ್ಲ.
ಅದು ಬರಲಿ; ಬಂದರೆ ನೋಡಿ-ಕೊಂಡೇನು!
ಸಿಂಹ ಅವನ ಮೇಲೆ ಜಿಗಿಯುತ್ತಲೇ, ಆತ ಥಟ್ಟನೇ ಮಗ್ಗುಲಿಗೆ ಸರಿದು...
ರಾಮಗುಪ್ತ, ಅವನ ಧೈರ್ಯ-ವೇ ಧೈರ್ಯ!
ಅಲ್ಲಪ್ಪ, ಅದು ಬರಿಯ ಜಂಭ!


ನದಿ ದಂಡೆಗೆ ಹೋದ ಮಕ್ಕಳು ಹೊತ್ತಿಗೆ ಬಾರದ್ದರಿಂದ ಸಮುದ್ರಗುಪ್ತ ದೊ
ಅವರನ್ನು ಹುಡುಕಲು ಸೈನಿಕರನ್ನು ಅಟ್ಟಿದ.
ಅಬ್ಬಾ! ರಾಜಕುಮಾರ ಚಂದ್ರಗುಪ್ತನ ಕಾಲ ಬುಡದಲ್ಲಿ ಸತ್ತು ಬಿದ್ದ ಸಿಂಹ!
ಸೈನಿಕರು ಅರಮನೆಗೆ ಧಾವಿಸಿ ಸಮುದ್ರಗುಪ್ತ ದೊರೆಗೆ ಈ ಸುದ್ದಿ ತಿಳಿಸಿದರು
ಎಷ್ಟೆಂದರೂ ನನ್ನ ಮಗ. ಅವನಿಗೆ ಏನೂ ಅಪಾಯ ಆಗಿಲ್ಲವಷ್ಟೆ!
ಆ ವೇಳೆಗೆ ರಾಜಕುಮಾರರೂ, ಅವರ ಗೆಳೆಯರೂ, ಅವರ ಬೆನ್ನಿಗೆ ಊರ ಜನರೂ ಅಲ್ಲಿಗೆ ಬಂದರು.
ಆತ ಸಿಂಹವನ್ನು ಕೊಲ್ಲುವುದನ್ನು ನಾನು ಕಣ್ಣಾರೆ ಕಂಡೆ.
ಅಬ್ಬಾ! ಆ ನಿಜವಾಗಿ ಧೈರ್ಯಶಾ



ಮಹಾರಾಜ, ನಮ್ಮ ರಾಜಕುಮಾರನನ್ನು ಮನ್ನಿಸಬೇಡವೇ ?
ಮಗನೇ, ನಿನ್ನನ್ನು ನಾನು ಹೇಗೆ ಮನ್ನಿಸಲಿ ? ನನ್ನ ಈ ವಿಶಾಲ ರಾಜ್ಯದ ಹೊರೆಯನ್ನು ನಿರ್ವಹಿಸಲು ನೀನೇ ಸಮರ್ಥ.
ಮಂತ್ರಿ, ಮಾತನ್ನು ಳಿದೆಯಾ ?
ನಿನಗೇಕೆ ಚಿಂತೆ ? ನಾನು ಬದುಕಿರುವ ತನಕ ಆ ಹಕ್ಕನ್ನು ನಿನ್ನಿಂದ ಯಾರೂ ಕಳೆಯಲಾರರು.
ಕಾಲದ ಬಳಿಕ ುದ್ರಗುಪ್ತ ದೊರೆ ೇರಿಕೊಂಡನು. ಕೂಡಲೇ -
ಮಂತ್ರಿ, ನನ್ನ ಪಟ್ಟಾಭಿಷೇಕಕ್ಕಾಗಿ ರಾಜ ಗುರುಗಳಿಗೆ ಹೇಳಿ ಕಳುಹಿಸು.
ರಾಜಕುವರ, ಬರಿದೆ ಆತುರ ಪಡಬೇಡ.



ಚಂದ್ರಗುಪ್ತ, ಏನಾದರೂ...
ಇಷ್ಟೊಂದು ಬೇ ನಿಮ್ಮ ತಂದೆ ಬೂದಿ ಇನ್ನೂ ತಣ್ಣಗಾಗಿಲ್ಲ.
ಹೀಗೆ ಕೆಲವು ದಿನ ಸರಿಯಿತು.
ರಾಜ ಗುರುಗಳೇ, ರಾಮಗುಪ್ತನಿಗೆ ಕಿರೀಟವನ್ನು ತೊಡಿಸಲು ಉಚಿತ ವ್ಯವಸ್ಥೆಯನ್ನು ಮಾಡಬೇಕಲ್ಲ.
ಆದರೆ ತೀರಿಕೊಂಡ ಮಹಾರಾಜರ ಮನಸ್ಸಿನಲ್ಲಿ ಚಂದ್ರಗುಪ್ತ ದೊರೆಯಾಗಬೇಕು ಎಂದಿತ್ತು.
ಆದರೆ ಪ್ರಸೇನ, ನನ್ನ ಅಣ್ಣನಿಗಲ್ಲ ಪಟ್ಟದ ಹಕ್ಕು
ಅದೇ ರೀತಿ ಪಟ್ಟಾಭಿಷೇಕ ನಡೆಯಿತು.
ನಿನ್ನ ಕುಲ ಪೂರ್ವಜರಂತೆ ನೀನು ದೇಶವನ್ನೂ, ಅದರ ಸಂಪ್ರದಾಯ-ಗಳನ್ನೂ ಕಾಪಾಡಿ-ಕೊಂಡು ಬಾ.
ಅವನಿಂದ ಅವೆರಡೂ ಆಗದ ಕೆಲಸಗಳು; ಇದು ಖಂಡಿತ.



ಬಳಿಕ ರಾಮಗುಪ್ತ ಧ್ರುವದೇವಿ ಎಂಬ ಅನನ್ಯ ಸುಂದರಿಯೊಬ್ಬಳನ್ನು ವಿವಾಹವಾದ.
ಂದ್ರಗುಪ್ತ, ಬಾ, ಬಾ; ನ್ನ ರಾಣಿ ನ್ನನ್ನು ಹುವಾಗಿ ಚಾರಿಸು- ದ್ದಾಳೆ.
ಚಂದ್ರಗುಪ್ತ, ನಿನ್ನ ಶೌರ್ಯ ಪರಾಕ್ರಮಗಳ ಕತೆಯನ್ನು ನಾನು ನನ್ನ ಮದುವೆಗೆ ಮುಂಚೆಯೇ ಕೇಳಿದ್ದೆ.
ಮರುದಿನ -
ಮಾಧವಿ, ಜನರು ಚಂದ್ರಗುಪ್ತನನ್ನು ಹೊಗಳುವುದು ಂದಿಷ್ಟೂ ಒಟ್ಟ ಚ್ಚಲ್ಲ.
ನಿಜ, ಅವರು ಇನ್ನಷ್ಟು ಹೊಗಳಿದರೂ ಕಡಿಮೆಯೇ.
ಆ ಚಂದ್ರಗುಪ್ತ ನಿನ್ನ ಗಂಡನ ಸಲುವಾಗಿ ತನ್ನ ಪಟ್ಟದ ಹಕ್ಕನ್ನೂ ತೊರೆದ.
ಹಾಗೇನು?
ಒಂದು ದಿನ-
ಪ್ರಭು, ನಾನು ಕೇಳಿದೆ - ನಿಮಗಾಗಿ ಚಂದ್ರಗುಪ್ತ ತನ್ನ ಕಿರೀಟವನ್ನು ಬಿಟ್ಟುಕೊಟ್ಟ- ನೆಂದು.
ನೀನು ಇನ್ನೂ ಏನೇನೆಲ್ಲ ಕೇಳಿರಲೂ ಬಹುದು.
ನನ್ನ ರಾಣಿ, ಯಾರಾದರೂ ಇನ್ನೊಬ್ಬರಿಗಾಗಿ ಅಂಥ ತ್ಯಾಗ ಮಾಡುತ್ತಾರೆಂದು ಎಣಿಸುತ್ತೀಯಾ?


ಕೆಲವು ತಿಂಗಳ ಬಳಿಕ ಆ ದೊರೆ ತನ್ನ ರಾಜ್ಯದ ದಕ್ಷಿಣ ಭಾಗಕ್ಕೆ ದಂಡೆತ್ತಿ ಸಾಗಿದ. ಕತ್ತಲಾಗುತ್ತಲೇ ಅವರು ಒಂದು ನದಿಯ ದಂಡೆಯ ಮೇಲೆ ಬೀಡು ಬಿಟ್ಟರು.
ಮರು ಬೆಳಿಗ್ಗೆ-ಅವರ ಸೇನೆ ತಿರುಗಿ ಮುಂದಕ್ಕೆ ಸಾಗಿತು.
ಕೊಂಬಿನ ದನಿ ಕೇಳಿಸುತ್ತಿದೆ! ಏನೋ ಅಪಾಯ ಕಾದಿದೆ.
ತುಸು ಹೊತ್ತಿನಲ್ಲಿ ಇನ್ನೊಬ್ಬ ಸೈನಿ
ಅರಸನ ಬಳಿಗೆ ಧಾವಿಸಿ ಬಂದ..
ಮಹಾರಾಜ, ಮುಂದಣ ಕಣಿ
ವೆಯ ಇಕ್ಕಟ್ಟನ್ನು ಶಕರು ವಶಪಡಿಸಿಕೊಂಡಿದ್ದಾರೆ. ನಾವು ಮುಂದಕ್ಕೆ ಹೋಗುವಂತಿಲ್ಲ..


ಸು ಸಮಯದ ಬಳಿಕ -
ರೆಯೇ, ಅಶುಭ
ದ್ದಿ ಬಂದಿದೆ;
ವು ಈಗಾಗಲೇ
ಟ ಬಂದ ಕಣಿವೆ-
ಬಾಗಿಲೂ ಶಕರ
ಗೆ ಸಿಕ್ಕಿದೆ.
ವು ಇಲ್ಲಿ
ಸಿಕ್ಕಿ
ದಂತೆಯೇ
ಸರಿ.
ಈಗೇನು ಮಾಡಲಿ? ಇಲ್ಲಿದ್ದರೆ ನಾವು ನಾಶವಾಗುತ್ತೇವೆ. ಮಂತ್ರಿ, ಏನಾದರೊಂದು ಉಪಾಯವನ್ನು ಹುಡುಕು.
ಕರ ದೊರೆಗೆ ಬೇಕೇ-
-ಬಂದು ವಿಚಾರಿ-
ವ. ಅವನೊಡನೆ
ಧಾನ ಹೂಡುವ.
ಸಂಧಾನವೇ ? ಬೇರೇನೂ ಉಪಾಯ ಇಲ್ಲವೇ ?
ನೀನಿಲ್ಲಿಂದ ತೊಲಗು ; ರಾಜಕಾರಣದಲ್ಲಿ ನಿನ್ನ ಅಧಿಕ ಪ್ರಸಂಗ ಬೇಡ.
ಜನ ದೂತರು ಬೇಗನೆ ಮರಳಿ ಬಂದರು.
ಶಕರಾಜ ಏನು ಹೇಳುತ್ತಾನೆ ?
ಮಹಾರಾಜ, ಅದನ್ನು ತಿಳಿಸಲು ನನ್ನ ಬಾಯಿ-ಯೇ ಬರದು.


ಅಂಜ ಬೇಡ ; ಬಹಳ ಹೆಚ್ಚಿನ ದಂಡ ಕೇಳುತ್ತಿದ್ದಾನೆಯೇ ?
ಅಲ್ಲ, ದೊರೆ, ಅವನದು ಅವಮಾನದ ಬೇಡಿಕೆ.
ಸಂಧಾನದ ಸಲುವಾಗಿ ನಾನು ಏನನ್ನೂ ಒಪ್ಪಿ ಕೊಂಡೇನು.
ಮಹಾರಾಜ, ಏನೇನೋ ಆತ ಹೇಳುತ್ತಾನೆ. ಮಹಾರಾಣಿ ಧ್ರುವದೇವಿ, ಹಿಂದೆ ಅವನ ಮಡದಿಯಾಗುವವಳಿದ್ದಳಂತೆ.
ಏನು! ಆತ ತನ್ನ ರಾಣಿ ತನ್ನ ಮಡದಿ ಆಗಬೇಕು ಅನ್ನುತ್ತಾನೆಯೇ?
ಅದನ್ನೇ ಆತ ಹೇಳುತ್ತಿರುವುದು.
ಅಸಂಬದ್ಧ ಸಂಗತಿ! ಅದನ್ನು ಬಿಟ್ಟು ಬೇರೇನೂ ದಾರಿ ಕಾಣಿಸದೇ?


ಹಾರಾಜ, ನಾವೀಗ ಶಕರ ಕೈಗೆ ಸಿಕ್ಕಿ ಟ್ಟಿದ್ದೇವೆ. ಅವರು ನ್ನು ಉಳಿಸಿ- ಕೇ ಉಂಟು.
ಹಾಗಿದ್ದರೆ, ಗಂಭೀರ-ವಾಗಿ ಆಲೋಚಿಸ-ಬೇಕಾಯಿತು.
ಮಹಾರಾಜ, ಎಲ್ಲಕ್ಕಿಂತ ಮುಖ್ಯ ನಮ್ಮ ರಾಜ್ಯದ ಭದ್ರತೆ ಅಲ್ಲವೇ?
ನಮ್ಮ ಕುಲ, ಸಂಪ್ರದಾಯದ ಪ್ರಶ್ನೆ ಎಲ್ಲುಳಿಯಿತು?
ಮಹಾರಾಜ, ದೇಶ ಉಳಿದರೆ, ಕುಲ ಸಂಪ್ರದಾಯಗಳನ್ನು ಕಾಯ್ಯಬಹುದು. ಅದೇ ಹೋದರೆ...
ಹಾಗಿದ್ದರೆ, ನಾನು ಧ್ರುವ ದೇವಿಯನ್ನು ಒಪ್ಪಿಸಬೇಕು ಎಂದಾಯಿತು. ಆಗಲಿ ದೂತ, ಅದಕ್ಕೂ ಸಿದ್ಧ ಎಂದು ತಿಳಿಸು.


ಮಹಾರಾಣಿ, ನಮ್ಮ ಪಾಲಿಗೆ ಮಹಾ ವಿಪತ್ತೇ ಸರಿ.
ಏಕೆ ಮಾಧವಿ, ದೊರೆ ಸಂಧಾನಕ್ಕೆ ಒಡಂಬಟ್ಟರೇ ?
ಹೌದು; ಅದೂ ನಿಮ್ಮನ್ನು ದಂಡವಾಗಿ ತೆತ್ತು-
ಮಾಧವಿ, ಸತ್ಯ ಹೇಳುತ್ತಿದ್ದೀಯಾ ?
ನಾನು ಅವರ ಮಾತುಗಳನ್ನೆಲ್ಲ ದೂರದಿಂದ ಕೇಳಿಯೇ ಹೇಳಿದ್ದು.
ಅಯ್ಯೋ, ಈ ಗಳಿಗೆಯಲ್ಲಿ ನನ್ನ ಈ ಮಾನಹಾನಿಯನ್ನು ಯಾರೂ ತಪ್ಪಿಸಲಾರರೇ ?
ಕಾಪಾಡುವ ಒಬ್ಬ ಇದ್ದ ಅದು ರಾಜಕುಮ ಚಂದ್ರಗುಪ್ತ
ಅವನಿಂದಲಾದೀತು ಹಾಗಿದ್ದರೆ, ಅವನಲ್ಲಿಗೆ ಧಾವಿಸು.
ಅನಂತರ-
ರಾಣಿ, ಮಾಧವಿ ನನಗೆ ಸಕಲ ಸಮಾಚಾರಗಳನ್ನು ತಿಳಿಸಿದಳು.
ರಾಜಕುಮಾ ನಿನ್ನ ಅಣ್ಣ ನನಗೆ ದ್ರೋಹವನ್ನು ಬಗೆದ.


ರಾಣಿ, ...ತ್ತಳಾಗು. ನಾನು ...ಕಿರುವಷ್ಟು ...ಲಿ ನಿನ್ನನ್ನು ...ರೂ ಅವ-...ನಿಸರು.
ರಾಣಿ, ರಾಜಕುವರ ಕೊಟ್ಟ ಮಾತಿಗೆ ಎಂದೂ ತಪ್ಪಿದವನಲ್ಲ.
...ತರ-
ಮಹಾರಾಜ, ಒಂದು ಮಾತನ್ನು ಆಡಲೇ?
ಏನು ಸಂಗತಿ?
...ಹಾರಾಜ, ...ನು ನಿಜಕ್ಕೂ ...ಕ್ಯ ದೊರೆಗೆ ರಾಣಿ ...ವ ದೇವಿಯನ್ನು ...ಪ್ಪಿಸಲು ...ಮ್ಮತಿಸಿದ್ದೀಯ?
ಬೇರೆ ಉಪಾಯವಿಲ್ಲ, ಚಂದ್ರಗುಪ್ತ.
ರಾಜಕುವರ, ರಾಜ್ಯವನ್ನು ಉಳಿಸಲು ಹಾಗೆ ಮಾಡದೆ ಗತ್ಯಂತರವಿಲ್ಲ.


ಹಾಗಾಗಲು ಖಂಡಿತಕ್ಕೂ ಬಿಡಲಾರೆ!
ಹಾಗಿದ್ದರೆ, ನಾನು ಬಲಿಯಾಗಬೇಕೇ?
ನಿನಗೋ ಹಾನಿ ಬರಲಾರದು; ಆದರೆ ಶಕ ದೊರೆಗೆ ರಾಣಿಯನ್ನೂ ಒಪ್ಪಿಸುವಂತಿಲ್ಲ.
ಅದು ಹೇಗಾದೀತು?
ಹೇಗೆಂದು ಸಮಯ ಬರುತ್ತಲೇ ತೋರಿಸುತ್ತೇನೆ.
ಹಾಗಿದ್ದರೆ, ಯಾವತ್ತೂ ಹೊಣೆ ನಿನ್ನದು.
ಧ್ರುವ ದೇವಿಯನ್ನು ಶಾಕ್ಯ ದೊರೆಗೆ ಒಪ್ಪಿಸಬೇಕಾದ ದಿನ ಬರುತ್ತಲೇ-
ರಾಜಕುಮಾರ, ನೀನು ನನಗಾಗಿ ಇದನ್ನು ಮಾಡುತ್ತಿದ್ದೀಯ!
ಮಹಾರಾಣಿ, ಈ ರಾಜಕುವರನ ರೂಪ ತೀರ ನಿಮ್ಮಂತೆಯೇ ಇದೆ.
ನನಗೂ ಅದೇ ಬೇಕಿತ್ತು ಸ್ವಲ್ಪ ಹೊತ್ತಿನ ನೋಡುವಿ


ಮಾಧವಿ, ನನ್ನ ಖಡ್ಗ ಹೊರಗೆ ಕಾಣಿಸುತ್ತಿಲ್ಲ ತಾನೇ.
ಸ್ವಲ್ಪವೂ ಕಾಣಿಸುವುದಿಲ್ಲ. ಯಾರಿಗೂ ಸಂಶಯ ಬರದು.
ದೇವಿ, ಹಾಗಿದ್ದರೆ ಹೊರಡಲು ಅನುಮತಿ ಕೊಡು.
ರಾಜ-ಕುವರ, ದೇವರು ನಿನ್ನನ್ನು ರಕ್ಷಿಸಲಿ!
ಪಲ್ಲಕ್ಕಿಯನ್ನು ಸಾಗಿಸಿ.
ಭವಾನಿಗೆ ಜಯ-ವಾಗಲಿ!
ಪಲ್ಲಕ್ಕಿ ಶಕರಾಜನ ಡೇರೆಯ ಬಳಿಗೆ ಬಂದಿತು.
ಮ್ಮ ಶಕರಾಜ- ಗೆ ಸಲ್ಲಬೇಕಾ- ದ್ದ ಅನುಪಮ ಸುಂದರಿ ಅವಳು ಈಗ ಅವನಿಗೇ ಸಲ್ಲುತ್ತಿ- ದ್ದಾಳೆ.
ಇಷ್ಟೆಲ್ಲ ಸೇನಾಸಮೂಹ ಇರುವಾಗ, ಅವನನ್ನು ಸೋಲಿಸುವವರಾರು?



ಪ್ರಭುವೇ, ಮಹಾರಾಣಿ ಧ್ರುವದೇವಿಯ ಪಲ್ಲಕ್ಕಿ ಬಂದಿದೆ.
ಅವಳ ಸಂಭ್ರಮದ ಸ್ವಾಗತಕ್ಕೆ ಸಿದ್ಧರಾಗಿದ್ದೀರಿ ಅಷ್ಟೇ.
ಅಹುದು, ಪ್ರಭು.
ಕಾವಲಿನವರೂ, ಸೈನಿಕರೂ ದೂರಕ್ಕೆ ಸರಿಯಲಿ.
ನನ್ನ ಬಹಳ ದಿನದ ಕನಸು, ಈಗ ನಿಜ ಆಯಿತು.
ಸ್ವಾಗತ, ಧ್ರುವದೇವಿ! ಇಂದು ನೀನು ಶಕ ರಾಜನ ಪತ್ನಿ; ಹೇಡಿಯಾದ ರಾಮಗುಪ್ತನ ಮಡದಿಯಲ್ಲ.



ಚಾಂಡಾಲ !
ನನ್ನನ್ನು ವಂಚಿಸಿದ್ದೇ ?
ಇಕೋ, ಇದು ನಿನಗೆ ಉಚಿತ ಶಾಸನ !
ರಾಜನು ಗಾಯಗೊಂಡು ಉರುಳಿ ಬಿದ್ದ. ಚಂದ್ರಗುಪ್ತನ ಯೋಧರು ಪಾಳೆಯವನ್ನು ಹೊಕ್ಕರು.
ಜಾಗ್ರತೆ ! ನೇ ಒಬ್ಬ ಶಕನು ತಪ್ಪಿಸಿಕೊಳ್ಳ- ದಿರಲಿ.
ಮಹಾರಾಜ, ತಮ್ಮ ಅಪ್ಪಣೆ.


ಕಾದಿರುವ ನಮ್ಮ ಪಡೆಗೂ ಇದನ್ನು ತಿಳಿಸಿ.
ಆಗಲಿ.
ಸ್ವಲ್ಪವೇ ಅವಧಿಯಲ್ಲಿ ಸಾವಿರಾರು ಶಕ ಸೈನಿಕರನ್ನು ಕೊಂದು ಚೆಲ್ಲಿದರ
ಚಂದ್ರಗುಪ್ತ ರಾಜಕುವರ-ರಿಗೆ ಜಯವಾಗಲಿ!

ಾರು ಶಕ ಸೈನಿಕರನ್ನು ಮತ್ತು ಅಧಿಕಾರಿಗಳನ್ನು ಸೆರೆ ಹಿಡಿದದ್ದೂ ಆಯಿತು.




ಶಕರ ಸೋಲಿನ ಸುದ್ದಿ ತಿಳಿಯುತ್ತಲೇ, ರಾಮಗುಪ್ತನೂ, ಧ್ರುವ ದೇವಿಯೂ ಅಲ್ಲಿಗೆ ಅವಸರಿಸಿ ಬಂದರು.
ಚಂದ್ರಗುಪ್ತ, ನಿನ್ನಿಂದ ಮಹದುಪಕಾರವಾಯಿತು. ಅದಕ್ಕೆ ಉಚಿತವಾದ ಮನ್ನಣೆಯನ್ನು ಸಲ್ಲಿಸುತ್ತೇನೆ.
ರಾಜಕುವರ, ನಾನು ನಿನಗೆ ತೀರ ತೀರ ಋಣಿಯು.


ಅವರೆಲ್ಲ ರಾಜಧಾನಿಗೆ ಮರಳುತ್ತಲೇ -
ಚಂದ್ರಗುಪ್ತನಿಗೆ ಜಯವಾಗಲಿ!
ಮಹಾರಾಣಿ ಧ್ರುವ ದೇವಿಗೆ ಮಂಗಲವಾಗಲಿ!



ಚಂದ್ರಗುಪ್ತನನ್ನಲ್ಲವೆ ಹಳೆಯ ದೊರೆ ಪಟ್ಟಕ್ಕೆ ಆರಿಸಿದ್ದು?
ಮಹಾರಾಜ ಸಮುದ್ರಗುಪ್ತನೇ ಹಾಗೆ ತಿಳಿಸಿದ್ದ.
ರಾಮಗು ಅಂಜುಗ ದೊರೆತನಕ್ ಅವನಿಗೆ ಏನೂ ಹಕ್ಕಿಲ್ಲ.


ತ್ರಿ, ಡೋಣ. ಗುಪ್ತನ ಯನ್ನು ಕೇಳಿ ಂಯಿತು.
ಮಹಾರಾಜ, ಅದಕ್ಕಿಂತ ಹೆಚ್ಚಿನ ಪ್ರಶಂಸೆಗೆ ಆತ ಪಾತ್ರನಲ್ಲವೆ!
ನಿನಗೂ ಅವನ ಮಂಕು ಬಡಿದಿದೆ.
ಸತ್ಯದ ಸಂಗತಿಯನ್ನು ಕಾಣಲಾರದ ಕುರುಡನೇ ನಾನು!
ಂಕಷ್ಟ ಕಳೆಯುತ್ತಲೇ ಚಂದ್ರಗುಪ್ತ ಕೂಸಿನಂತೆ ನಿಶ್ಚಿಂತೆಯಿಂದ ನಿದ್ದೆ ಹೋದ.
ರಾತ್ರಿ ಚಂದ್ರಗುಪ್ತನ ಮಲಗುವ ಮನೆಯಲ್ಲಿ -


ಹೇ ! ಯಾರದು ?
ಓ, ದೇವರೇ ! ನೀನು ?


ರುದಿನ ಆಸ್ಥಾನದಲ್ಲಿ-
ತಮ್ಮೆಲ್ಲರಿಗೆ ಒಂದು ವಿಷಾದದ ಸುದ್ದಿ ತಿಳಿಸಬೇಕಾಗಿದೆ. ರಾಮಗುಪ್ತ ದೊರೆಗಳು ತೀರಿಕೊಂಡರು
ನಡುರಾತ್ರಿಯಲ್ಲಿ ಚಂದ್ರಗುಪ್ತನನ್ನು ಅವನು ಇರಿಯಲು ಹೋದನಂತೆ!
ಆ ಕ್ಷಣಕ್ಕೆ ಊರ ಜನರ ಹಿಂಡು ಆಸ್ಥಾನಕ್ಕೆ ಧಾವಿಸಿ ಬಂತು.
ಚಂದ್ರಗುಪ್ತನಿಗೆ ಜಯವಾಗಲಿ!
ಆತ ರಾಜ್ಯವನ್ನು ರಕ್ಷಿಸಬಲ್ಲ; ಗುಪ್ತ ವಂಶದ ಕೀರ್ತಿಯನ್ನೂ ಉಳಿಸಬಲ್ಲ.
ಗುಪ್ತ ಸಿಂಹಾಸನಕ್ಕೆ ಚಂದ್ರಗುಪ್ತನೇ ತಕ್ಕವನು.


ಗುಪ್ತರ ಈ ಪ್ರತಿಷ್ಠಿತ ಸಿಂಹಾಸನ ಒಂದು ಕ್ಷಣವೂ ಬರಿದಾಗಿರ-ಕೂಡದು.
ರಾಜಕುಮಾರ ಚಂದ
ಪ್ತನ ಪಟ್ಟಾಭಿಷೇಕಕ್ಕೆ
ಒಂದಿಷ್ಟೂ ವಿಳಂಬವ
ಡಕೂಡದು.
ಮಹನೀಯರೇ, ನನ್ನದೊಂದು ಗಂಭೀರ ಸೂಚನೆ ಇದೆ.
ಏನಾದರೂ ಹೊಸ ತಂಟೆಯ-ನ್ನು ಎಬ್ಬಿಸುವ ಯೋಚನೆಯೋ!
ರಾಮಗು
ನನ್ನು ಪ
ಎತ್ತಿಸಿದ
ಅವನ
ಈ ರಾಜ್ಯದ ಮತ್ತು ತನ್ನ ಕುಲದ ಮರ್ಯಾದೆಯ-ನ್ನು ಕಾಯುವ ವ್ಯಕ್ತಿಯೇ ಚಂದ್ರಗುಪ್ತ.
ಕೊನೆಗೊಮ್ಮೆ ಅವನಿಗೆ ಬುದ್ಧಿ ಬಂತು.





ಚಂದ್ರಗುಪ್ತನಿಗಾಗಿ, ನಾವು ನಮ್ಮ ಪ್ರಾಣವನ್ನೇ ಅರ್ಪಿಸುವವರು.
ಸಿಂಹಾಸನಕ್ಕೆ ಚಂದ್ರಗುಪ್ತನೇ ನ್ಯಾಯವಾದ ಅಧಿಕಾರಿ.
ಗೆ ಮಹಾರಾಣಿ ದೇವಿಯನ್ನು ವ ಅಧಿಕಾರ- ಇದೆ.
ಅದಾದರೆ ನಿಜ! ಅವಳ ಮಾನವನ್ನು ಕಾಯ್ದವನೇ ಚಂದ್ರಗುಪ್ತ.
ಮಹಾ ಮುನಿಗಳು ಇತ್ತ ಬರೋಣ- ವಾಗಲಿ.
ಕಿರೀಟ ಧಾರಣೆಯಾದೊಡನೆ ವಿವಾಹವೂ ಜರುಗಲಿ.


ಕಿರೀಟಧಾರಣೆ ಆಗುತ್ತಲೇ -
ದೇವರು ನಿನ್ನನ್ನು ಹರಸಲಿ!
ಮಹಾರಾಜ ಚಂದ್ರಗುಪ್ತನಿಗೆ ಜಯವಾಗಲಿ!
ಇದು ತುಂಬ ಶುಭ ದಿವಸ! ಮದುವೆಯ ಕೆಲಸವನ್ನೂ ಮಾಡಬಹುದಲ್ಲ.
ಗುರುಗಳೇ, ಹಾಗೆ ಮಾಡಿದರೆ ಒಪ್ಪೀತೇ?
ಮಹಾರಾಜನೂ ಮಹಾರಾಣಿ ಧ್ರುವದೇವಿಯೂ ಅದಕ್ಕೆ ಸಮ್ಮತಿಸ-ಬೇಕಲ್ಲ?
ನಿಮ್ಮ ಆಜ್ಞೆಗೆ ನಾನು ಬದ್ಧನಷ್ಟೆ.
ಜನರು, ಮಂತ್ರಿಗಳು ಮತ್ತು ಮಹಾರಾಜ ಚಂದ್ರಗುಪ್ತನೂ ಇಚ್ಛಿಸಿದಂತೆ ನಡೆಯುವವಳು ನಾನು.


ಕ್ಷವಾಗಿ ವಿವಾಹ ಜರುಗಿತು.


ಮಂತ್ರಿಯೇ,
ಹಾಜನರು
ತುಸು
ದಿರಲಿ.
ಅವರಿಗೆ ಒಂದು
ವಿಶೇಷ ಮಾತನ್ನು
ತಿಳಿಸಬೇಕಾಗಿದೆ.


ಪ್ರಜೆಗಳೇ, ಇಂದು ನಿಮ್ಮನ್ನೆಲ್ಲ ಸಾಕ್ಷಿ ಇರಿಸಿಕೊಂಡು ನಾನು ಹೇಳುತ್ತಿದ್ದೇನೆ- ನಮ್ಮ ದೇಶದಲ್ಲಿ ಒಬ್ಬನೇ ಒಬ್ಬ ಶಕ ಉಳಿಯದಂತೆ ಮಾಡುತ್ತೇನೆ.
ಮಹಾರಾಜರು ಈ ಪ್ರತಿಜ್ಞೆ ನೆನಪು ಅವರಿಗೆ ಮರವೆಯಾಗದ ನಾನು ಎಚ್ಚ ವಹಿಸುವವಳ

ಧ್ರುವದೇವಿಯು ತನ್ನ ಮಾತಿನಂತೆ ನಡೆದಳು. ಒಂದು ದಿನ ಉಜ್ಜಯಿನಿಯ ಆಸ್ಥಾ
ಕಾಳಿದಾಸ, ನಿನ್ನಂಥ ಮಹಾಕವಿ ಇನ್ನೊಬ್ಬನಿಲ್ಲ. ಮುಂದಣ ಪೂರ್ಣಿಮೆಯ ದಿನ ನಿನ್ನ 'ಶಾಕುಂತಲ' ನಾಟಕವನ್ನು ತಿರುಗಿ ಅಭಿನಯಿಸಿ ತೋರಿಸಬೇಕು ಆಗದೇ, ಮಹಾರಾಣಿ?
ಅತ ಬರಹ ಸೊಬ ಅದ ಮಹಾ


ರ ಅರಮನೆಯಲ್ಲಿ-
ದೇವಿ, ಈ ಸಂಜೆ ಆಸ್ಥಾನದಲ್ಲಿ ನೀನು ನನಗೆ ಏನನ್ನೋ ಹೇಳಲು ಹೊರಟಿದ್ದೆ-
ಮಹಾರಾಜ, ನಾವು ಆ ಸ್ಥಳದಲ್ಲಿ ನಿಂತುದು ಹೆಚ್ಚಾಗಲಿಲ್ಲವೇ ?
ಥಳ ನನಗೆ ಟ್ಟ ಹಿಡಿಸಿದೆ! ದೆ ಜನರು ಕೂಡ ಯುವರು.
ಅವರನ್ನು ಶಕರ ಬಾಧೆಯಿಂದ ನೀನು ರಕ್ಷಿಸಿದೆ ಎಂಬುದಕ್ಕಾಗಿ ಪ್ರೀತಿಸುತ್ತಾರೆ. ಅವರು ನಿನ್ನನ್ನು ಕರೆಯುತ್ತಿರುವುದೇ ವಿಕ್ರಮಾದಿತ್ಯ ಎಂದು. ಆದರೆ-


ಆದರೆ ಶಕರ ಹಿಡಿತ ಗುಜರಾತಿನಲ್ಲಿ ಇನ್ನೂ ತಪ್ಪಿಲ್ಲವಲ್ಲ; ಅದರ ನೆನಪನ್ನು ನನಗೆ ಕೊಟ್ಟುದೇನು?
ಅಹುದ
ಅಷ್ಟೇ
ಈ ರಾಜ
ಗಡಿಯ
ಕುಶಾನ
ಜನರನ್ನ
ಪೀಡಿಸುತ್ತಿದ
ಧ್ರುವ ದೇವಿಯ ನುಡಿಯಿಂದ ಪ್ರೇರಣೆಗೊಂಡ ಚಂದ್ರಗುಪ್ತ ಕ್ಷಿಪ್ರದಲ್ಲಿಯೇ
ಮೇಲೆ ದಂಡೆತ್ತಿ ಹೊರಟ.
ನಿನಗೆ ಸದಾ ಜಯವಾಗಲಿ!
ಕೆಲವು ತಿಂಗಳ ಬಳಿಕ-
ಮಹಾರಾಣಿ, ಚಕ್ರವರ್ತಿಗಳಿಂದ ನಿನಗೊಂದು ಓಲೆ ಬಂದಿದೆ.
ಹಾಗಿದ್ದರೆ ನಾನು ಕೇಳ
ಸುದ್ದಿ ನಿಜ. ಗುಜರಾತಿನ
ಶಕರೊಡನೆ
ಮಹಾರಾಜರು ಹೂಡಿ
ಯುದ್ಧದಲ್ಲಿ ಜಯ ದ
ಕ್ಕಿರಬೇಕು.


ಅಹುದು, ಮಾಧವಿ; ನಮ್ಮ ದೇಶದಿಂದ ಪರದೇಶಿಗಳ ದಬ್ಬಳಿಕೆ ಸಂಪೂರ್ಣ ಕೊನೆಗೊಂಡಿತು.
ಇನ್ನು ಮಹಾರಾಜರ ಸವಾರಿ ಬೇಗನೇ ಬಂದೀತು.
ಶುಭ ಸಮಾಚಾರ!
ತಮ್ಮ ವೀರಾಧಿವೀರನನ್ನು ಬಲು ಉತ್ಸಾಹದಿಂದ ಸ್ವಾಗತಿಸಿದರು.
ಂತರ- ಚಂದ್ರಗುಪ್ತ ದೊರೆ ಹಿಂದೂಕುಶ ಪರ್ವತದ ಆಚೆಗಿರುವ ಬೆಕ್ಟ್ರಿಯಾ
ಶದ ತನಕವೂ ದಂಡೆತ್ತಿ ಹೋಗಿ ಕುಶಾನರನ್ನೂ ಸೋಲಿಸಿಬಿಟ್ಟನು.


NOW FOR THE FIRST TIME AMAR CHITRA KATHA OFFERS STORIES BA
ON IMMORTAL INDIAN CLASSICS AND HISTORY IN COLOURFUL PICTUR
AMAR
CHITRA
KATHA
TITLES ON SALE:
THE STORY OF KRISHNA
SHAKUNTALA
THE PÀNDAVA PRINCES
SAVITRI
THE STORY OF RAMA
NALA DAMAYANTI
HARISCHANDRA
THE SONS OF RAMA
HANUMAN
MAHABHARATA
CHANAKYA
BUDDHA
SHIVAJI
GURU GOBIND SINGH
PRITHVIRAJ CHAUHAN
RANA PRATAP
FOR HEALTHY & WHOLESOME ENTERTAINM
PUBLISHED IN ENGLISH HINDI KANNADA
GUJARATI TELUGU MARATHI & TAMIL
RANA PRATAP
GURU GOBIND SINGH
PRITHVIRAJ CHAUHAN
amar chitra katha
SHIVAJI
KARNA
BUDDHA
AMAR
CHANAKYA
INDIA BOOK HOUSE
Bombay 26, Calcutta 16, New Delhi 1, Madras 2, Bangalore 9, Hyderabad
Patna 4, Nagpur 1 Lucknow & Trivandrum

೧ ರಾಮಗುಪ್ತನಿಗೆ ಚಂದ್ರಗುಪ್ತನ ಬಗ್ಗೆ ಅಸೂಯೆ ಏಕೆ ಹುಟ್ಟಿತು?
೨ ಮಹಾರಾಜನ ಮನಸ್ಸಿನಲ್ಲಿ ಚಂದ್ರಗುಪ್ತನು ಪಟ್ಟವೇರಬೇಕೆಂದಿದ್ದರೂ, ರಾಮಗುಪ್ತನಿಗೇಕೆ ಪಟ್ಟಾಭಿಷೇಕವಾಯಿತು?
೩ ರಾಮಗುಪ್ತನಿಗೆ ಬಂದ ಆಪತ್ತೇನು?
೪ ಶಕರಾಜನು ಸಂಧಿಗಾಗಿ ಹಾಕಿದ ಕರಾರು ಯಾವುದು?
೫ ಚಂದ್ರಗುಪ್ತನು ಶಕರನ್ನು ಹೇಗೆ ಸೋಲಿಸಿದನು?
೬ ರಾಮಗುಪ್ತನು ಅದೆಂತು ಮರಣ ಹೊಂದಿದನು?
೭ ಚಂದ್ರಗುಪ್ತನಿಗೆ ವಿಕ್ರಮಾದಿತ್ಯನೆಂಬ ಹೆಸರು ಹೇಗೆ ಬಂದಿತು?
೮ ಅರಸನಾದ ಮೇಲೆ ಚಂದ್ರಗುಪ್ತನು ಮಾಡಿದ ಕಾರ್ಯಗಳೇನು?

ಅಧಿಕೃತ ಮಾರಾಟಗಾರರು: ಇಂಡಿಯಾ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು-9

ಶಿವ ಪಾರ್ವತಿ

9 ರೂ. 1.50 ಕನ್ನಡ ರೂಪಾಂತರ : ಡಾ॥ ಕೆ. ಶಿವರಾಮ ಕಾರಂತ.



ಅಸುರೀ ಶಕ್ತಿಗಳ ಮೇಲೆ ಶಿವನು ನಡೆಸಿದ ದಿಗ್ವಿಜಯದ ಆಖ್ಯಾಯಿಕೆಗಳಿಂದ ನಮ್ಮ ಪುರಾಣಗಳು ತುಂಬಿಹೋಗಿವೆ. ರುದ್ರ ಅಥವಾ ಭೈರವನಾಗಿ ಅವನು ದುಷ್ಟ ನಿಗ್ರಹ ಮಾಡಿದ್ದಾನೆ. ಶಂಕರ ಅಥವಾ ಶಿವನಾಗಿ ಲಯವಾದದ್ದನ್ನು ಮತ್ತು ಪ್ರಸ್ಥಾಪಿಸಿದ್ದಾನೆ. ಅವನು ಆದರ್ಶ ಮಹಾಯೋಗಿ; ಮಹಾತಪಸ್ವಿಯೂ ಅಹುದು.


ಪುರಾಣ ಕಥೆಗಳ ಪ್ರಕಾರ ದಕ್ಷನ ಮಗಳಾದ ಸತಿಯು ಅವನ ಸಹಧರ್ಮಿಣಿ. ಆದರೆ ದಕ್ಷನಿಗೆ ಈ ತಪಸ್ವೀ ಅಳಿಯನ ಬಗ್ಗೆ ಆದರ ಅಷ್ಟಕ್ಕಷ್ಟೆ. ದಕ್ಷನು ಒಂದು ಮಹಾಯಜ್ಞವನ್ನು ಹಮ್ಮಿಕೊಂಡು ಎಲ್ಲರನ್ನೂ ಆಮಂತ್ರಿಸುತ್ತಾನೆ—ಶಿವನೊಬ್ಬನನ್ನು ಬಿಟ್ಟು. ಸತಿಗೆ ತನ್ನ ಗಂಡನಿಗಾದ ಈ ಅಪಮಾನವನ್ನು ನುಂಗುವುದು ಕಷ್ಟವಾಯಿತು. ಮುಂದೆ ದಕ್ಷನು ಶಿವನನ್ನು ಬೇಕೆಂದೇ ಕಡೆಗಣಿಸಿದಾಗ, ಆ ಹೀನಾಯವನ್ನು ತಡೆಯಲಾಗದೇ ಸತಿಯು ಅಗ್ನಿಪ್ರವೇಶ ಮಾಡುತ್ತಾಳೆ. ಅವಳೇ ಮುಂದೆ ಹಿಮವಂತನ ಮಗಳು—ಪಾರ್ವತಿಯಾಗಿ ಜನಿಸುತ್ತಾಳೆ.

ಕಾಳಿದಾಸನ ಕುಮಾರ ಸಂಭವದಲ್ಲಿ ಶಿವನ ಮೇಲೆ ಪಾರ್ವತಿಯ ಅನನ್ವಿತ ಪ್ರೇಮ ಹಾಗೂ ಧ್ಯಾನ-ತಪಸ್ಸುಗಳಿಂದ ತನ್ನ ಪ್ರಿಯಕರನನ್ನು ಒಲಿಸಿಕೊಳ್ಳುವುದಕ್ಕಾಗಿ ಅವಳು ಮಾಡಿದ ಪ್ರಯತ್ನಗಳು ವರ್ಣಿತವಾಗಿವೆ. ಈ ಸಚಿತ್ರ ಕಥಾನಕವು ಕಾಳಿದಾಸನ ಕೃತಿಯ ಮೇಲೆ ಆಧಾರಿತವಾಗಿದೆ. ಶಿವನ ಮೇಲಿನ ಪಾರ್ವತಿಯ ಚಿರ ಪ್ರೇಮವು ಇಂದಿಗೂ ಅನೇಕ ಭಾರತೀಯ ಜನಪದ ಕಾವ್ಯಗಳ ಕಥಾವಸ್ತುವಾಗಿ ಹೊರಹೊಮ್ಮಿದೆ.

Printed by H. K. Nasta at IBH Printers, Marol Naka, Mathuradas Vissanji Road, Andheri East, Bombay 59. Published by IBH Prakashana, Gandhinagar, Bangalore-9.

Editor: Anant Pai Retold by: Kamala Chandrakant Artwork: Ram Waeerkar

ಶಿವ ಪಾರ್ವತಿ



ಶಿವನ ಮೊದಲ ಪತ್ನಿ ಸತಿ ಎಂಬವಳು ದಕ್ಷನ ಮಗಳು; ದಕ್ಷನ ಮನಸ್ಸಿಗೆ ಅಳಿಯ ಒಗ್ಗಿರಲಿಲ್ಲ. ಆತ ಅವಕಾಶ ಸಿಕ್ಕಿದಾಗಲೆಲ್ಲ ಶಿವನನ್ನು ಅವಮಾನಿಸುತ್ತಿದ್ದ. ತಂದೆಯ ಈ ವರ್ತನೆಯನ್ನು ಸಹಿಸಲಾರದ ಸತಿ, ಶರೀರ ತ್ಯಾಗ ಮಾಡಿದಳು. ಸತಿಯ ಮರಣದ ಬಳಿಕ ಶಿವನು ಹಿಮಾಲಯ ಪರ್ವತಕ್ಕೆ ಹೋಗಿ ಅಲ್ಲಿ ತಪೋನಿರತನಾದ.


ಶಿವನು ಧ್ಯಾನ ಮಾಡುತ್ತಿದ್ದ ವನದ ತುಸು ಸಮೀಪದಲ್ಲೇ ಪರ್ವತರಾಜ ಎನಿಸಿದ ಹಿಮವಂತ ವಾಸವಾಗಿದ್ದ.
ಆತ ಸ್ವರ್ಗದ ಅಪ್ಸರೆಯಾದ ಮೇನ ಯನ್ನು ಮದುವೆಯಾಗಿದ್ದ.
ಅವರಿಬ್ಬರನ್ನೂ ಜನರು ಬಹಳ ಪ್ರೀತಿಸುತ್ತಿದ್ದರು.
ಒಂದು ದಿನ-
ಮೇನಕೆಗೆ ಹೆಣ್ಣು ಶಿಶು ಆಗಿದೆ! ಎಷ್ಟೊಂದು ಚೆಲುವಿನ ಶಿಶು!
ಅವಳನ್ನು ಪಾರ್ವತಿ ಎಂದು ಕರೆಯೋಣ.


ಪಾರ್ವತಿಯ ಜನನದಿಂದ ಪ್ರಕೃತಿಯೂ ಹಿಗ್ಗಿತು.
ಈಕೆ ಎಷ್ಟು ಚೆಲುವಿನ ಮಗು!
ಸುಮ್ಮನಿರಿ, ದುಷ್ಟ ಶಕ್ತಿಗಳು ಕಣ್ಣಿಟ್ಟಾವು.
ಆದರೆ ವಾಸ್ತವವಾಗಿ ಆ ಪಾರ್ವತಿ, ತಿರುಗಿ ಜನ್ಮ ತಾಳಿ ಬಂದ ಸತಿ ಆಗಿದ್ದಳು. ಈ ಬಾರಿ ಅವಳು ತನ್ನ ವಿಷಯದಲ್ಲಿ ಅಭಿಮಾನ ತಾಳುವ ತಂದೆಯನ್ನು ಪಡೆದು ಬಂದಿದ್ದಳು.
ಆಕೆ ಬಲು ಸುಂದರಿ, ಬಲು ಚುರುಕು; ಅವಳಿಗೆ ಗೆಳತಿಯರೂ ಅನೇಕ ಮಂದಿ.
ಪಾರ್ವತಿ, ಹಿಡಿ. ಹಾ! ಹಾ! ಹಾ! ನಿನ್ನಿಂದಾಗಲಿಲ್ಲ, ಪುನಃ ತಪ್ಪಿತು.
ಸಾಕಮ್ಮ ಈ ಆಟ; ಮನೆಗೆ ಹೋಗಿ ಗೊಂಬೆಗಳ ಆಟ ಆಡುವ.


ಕಾಲ ಸರಿಯಿತು ;
ಪಾರ್ವತಿ ಸುಂದರ ಯುವತಿಯಾಗಿ ಬೆಳೆದಳು.
ಮಗಳೆ, ಪಾರ್ವತಿ, ನಿನಗೆ ವಿವಾಹವಾಗುವ ಕಾಲ ಬಂತಲ್ಲ.
ಅಮ್ಮಾ!
ಆ ರಾತ್ರಿ -
ಪಾರ್ವತಿಗೆ ಯೋಗ್ಯ ವರನನ್ನು ಹುಡುಕುವ ಕಾಲ ಬಂದಿದೆ.
ಅದು ನನಗೂ ಗೊತ್ತಿದೆ; ಆದರೆ ಅವಳ ಯೋಗ್ಯತೆಗೆ ತಕ್ಕ ವರನೇ ಹೊಳೆಯುಲ್ಲೋ
ಹಿಮವಂತನಿಗೆ ಮಗಳೆಂದರೆ ಜೀವ ; ಅತಿ ಶ್ರೇಷ್ಠ ವರನಿಗಷ್ಟೇ ಅವಳು ಅರ್ಹಳು.
ಪ್ರತಿಯೊಂದು ವಿಧದಲ್ಲೂ ಅನುರೂಪನಾಗಿ ಕಾಣಿಸಿದವನಿಗೇ ನಾನು ಮಗಳನ್ನು ಕೊಡುವವನು.
ಒಂದು ದಿನ ನಾರದ
ಹಿಮವಂತನಲ್ಲಿಗೆ ಬಂದ.
ನಾರಾಯಣ! ನಾರಾಯಣ!
ಪಾರ್ವತಿ, ಇತ್ತ ಬಾ.
ಬಂದೆ, ಅಪ್ಪಾ.


ಪಾರ್ವತಿ ತನ್ನ ಗೆಳತಿಯರನ್ನು ಕೂಡಿಕೊಂಡಾಗ -
ನಿನ್ನ ಮಗಳ ಭವಿಷ್ಯದಲ್ಲಿ - ಮಹಾ ಬಲಿಷ್ಠನಾದ ಶಿವನನ್ನು ಮದುವೆಯಾಗುವ ಯೋಗವಿದೆ.
ನಾನು ಶಿವನನ್ನು ಮಾತನಾಡಿಸಲೆಂತು? ಆತ ನಿರಾಕರಿಸಿಬಿಟ್ಟರೆ? ಸತಿ ದೇಹತ್ಯಾಗ ಮಾಡಿದಂದಿನಿಂದ ಅವನು ಹೆಂಗುಸರ ಮುಖವನ್ನು ಸಹ ಕಂಡವನಲ್ಲ...
...ಆದರೂ ಬೇರೆ ವರನನ್ನು ಹುಡುಕಲು ನಾನು ಇಚ್ಛಿಸುವುದಿಲ್ಲ. ನಾರದರ ಭವಿಷ್ಯವಾಣಿ ಯಾವಾಗಲೂ ಸತ್ಯವೇ ಆಗುತ್ತದೆ. ನಾನು ಕಾದುಕೊಂಡಿರುವೆನು.


ಹಾಗಾಗಿ ಹಿಮವಂತ ಕಾದಿರ-ಬೇಕಾಯಿತು. ಒಂದು ಸುದಿನದಲ್ಲಿ-
ನಾನು ಬಹಳ ಕಾದದ್ದಾಯಿತು; ಶಿವನು ತಪಸ್ಸಿನಲ್ಲಿ ಮುಳುಗಿಬಿಟ್ಟಿದ್ದಾನೆ.
ಫಕ್ಕನೆ ಆತನಿಗೆ ಒಂದು ವಿಚಾರ ಹೊಳೆದು ಮೇನಕೆಯ ಬಳಿಗೆ ಹೋದ.
ನಾನು ಶಿವನ ಸೇವೆ-ಗಾಗಿ ಪಾರ್ವತಿಯನ್ನು ಕಳುಹುತ್ತೇನೆ. ಅವಳ ಚೆಲುವಿಕೆಗೆ ಅವನು ಮರುಳಾಗದಿರನು.
ಅದಾದರೆ ಒಳ್ಳೆಯ ಉಪಾಯ.
ಹಿಮವಂತ ಪಾರ್ವತಿಯನ್ನು ಬಳಿಗೆ ಕರೆಯಿಸಿದ.
ಮಗಳೇ, ನೀನೂ, ನಿನ್ನ ಗೆಳತಿಯರೂ ಸಮೀಪದ ವನದಲ್ಲಿ ತಪಸ್ಸು ಮಾಡುತ್ತಿರುವ ಶಿವನ ಸೇವೆ ಮಾಡಿಕೊಂಡು ಇರುವಿರಾ?
ಅಪ್ಪಾ, ಅವನನ್ನು ನಾವು ಹಲವು ಬಾರಿ ಕಂಡಿದ್ದೇವೆ. ಅಲ್ಲಿಗೆ ಹೋಗುತ್ತೇವೆ.



ಮವಂತ ಪಾರ್ವತಿಯನ್ನೂ ಅವಳ ಬ್ಬರು ಸಖಿಯರನ್ನೂ ಶಿವನ ಬಳಿಗೆ ಕರೆದೊಯ್ದು.
ಪ್ರಭುವೇ, ನೀನು ಏಕಾಕಿಯಾಗಿರುವೆ. ನಿನಗೆ ಸಹಾಯಕರಿಲ್ಲ. ನಿನ್ನ ಪೂಜಾಕಾರ್ಯಗಳಲ್ಲಿ ನನ್ನ ಮಗಳು ನೆರವಾಗಬಲ್ಲಳು.
ಶಿವನು ಶಾಂತನಾಗಿ ಒಂದೆರಡು ಕ್ಷಣ ಅವರನ್ನೇ ನೋಡಿದ.
ಈ ಬಾಲಕಿಯರು ನನ್ನ ಸೇವೆ ಮಾಡಿದರೆ ತೊಡಕಿಲ್ಲ; ವಿರಕ್ತನಾದ ನನ್ನ ಬದುಕಿಗೆ ಅವರಿಂದ ಅಡ್ಡಿಯಾಗದು.
ನಂತರ ಆತ ಹಿಮವಂತನಿಗೆ ಹೇಳಿದ-
ನಿನ್ನ ಈ ಸಹಾಯಕ್ಕಾಗಿ ನಾನು ನಿನಗೆ ಋಣಿಯಾಗಿದ್ದೇನೆ. ಈ ಯುವತಿಯರು ತಮ್ಮಿಷ್ಟದಂತೆ ನನ್ನ ಸೇವೆಯನ್ನು ಮಾಡಿಕೊಂಡಿರಬಹುದು.
ಹಿಮವಂತ ತುಂಬ ಹಿಗ್ಗಿನಿಂದ ಆ ತರುಣಿಯರನ್ನು ಅವನ ಬಳಿ ಬಿಟ್ಟು ಬಂದ.
ನಾರದ ನುಡಿದ ಭವಿಷ್ಯ ಬೇಗನೆ ನಿಜ ಆದೀತು. ಪಾರ್ವತಿಯ ಭವಿಷ್ಯದ ಬಗ್ಗೆ ನನಗೆ ಭರವಸೆ ಇದೆ.


ಪಾರ್ವತಿ ಶಿವನ ಸೇವೆಯನ್ನು ಕೈಕೊಂಡಳು.
ಪಾರ್ವತಿ, ಇಂದಿನ ಅರ್ಚನೆಗೆ ಬೇಕಾದ ಹೂವುಗಳನ್ನು ತಂದಾಯಿತೇ?
ಇಲ್ಲಿವೆ, ಪ್ರಭು.
ಪಾರ್ವತಿ, ಬಾ. ಹರಿಣಗಳಿಗೆ ಮೇವನ್ನು ಉಣಿಸುವ.
ತುಸು ತಾ ಪ್ರಭುವಿನ ಆಸನವನ ತೊಳೆದು ಬರುತ್ತೇನೆ.
ಆಕೆ ಆತನ ಪೂಜೆಗಾಗಿ ಜಾಗರೂಕತೆ-ಯಿಂದ ದರ್ಭೆಯನ್ನು ಆರಿಸಿದಳು...
ಮುಂದೆ ಬನ್ನಿ, ಒಳ್ಳೊಳ್ಳೆಯ ದರ್ಭೆ ಮತ್ತೂ ಮುಂದಕ್ಕಿದೆ.
ಅಯ್ಯೋ ಪಾರ್ವತಿ, ನಮಗೆ ದಣಿವು ಆಗಿದೆ.
...ಬಿಸಿಲಿನ ಬೇಗೆ ಹೆಚ್ಚಿದಾಗ ಅವ
ಆತನಿಗೆ ಗಾಳಿ ಹಾಕಿದಳು.


ಪಾರ್ವತಿ, ಮುಗಿಯು- ಲ್ಲವೇ ಕೆಲಸ, ಬಾ, ಬಾ.
ಗೆಳತಿಯರು ಕರೆಯುತ್ತಿದ್ದಾರೆ, ನಿಜ. ಆದರೆ ನಾನು ಪ್ರಭುವಿನ ಸೇವೆಯಲ್ಲೇ ನಿರತಳಾ-ಗುವೆನು.
ನನಗೆ ದಣಿವಾದರೆ, ಆತನ ನೊಸಲನ್ನೇರಿದ ಎಳೆಚಂದ್ರನನ್ನು ಕಂಡರೆ ಸಾಕು, ದಣಿವಾರುತ್ತದೆ. ಇದೆಂಥ ಅದ್ಭುತ ಶಕ್ತಿಯೋ!
ಈ ರೀತಿಯಲ್ಲಿ ಪಾರ್ವತಿಯು ಶಿವನನ್ನು ಹೃತ್ಪೂರ್ವಕವಾಗಿ ಪ್ರೀತಿಸತೊಡಗಿದಳು.
ಸ್ವರ್ಗಲೋಕದಲ್ಲಿ ಆಪತ್ತು ದೊದಗಿತ್ತು. ದ್ರನು ದೇವತೆಗಳೊ- ನೆ ಬ್ರಹ್ಮನಲ್ಲಿಗೆ ಓಡಿಬಂದ.
ಬನ್ನಿ, ಬನ್ನಿ, ಸಂಗತಿಯೇನು? ನಿಮ್ಮೊಬ್ಬರ ಮುಖದಲ್ಲೂ ಹರ್ಷವೇ ಕಾಣಿಸದು. ಕತ್ತಲೇ ಕವಿದಂತಿದೆ.


ಮಾತನಾಡಲು ಗುರು ಬೃಹಸ್ಪತಿಗೆ ಇಂದ್ರ ಸೂಚನೆ ಕೊಟ್ಟ.
ತಾರಕನೆಂಬ ದುಷ್ಟ ಅಸುರನಿಂದ ನಮಗೆ ಕ್ಷೇಮ ಇಲ್ಲವಾಗಿದೆ.
ಆತ ನಮ್ಮ ನೆಲೆಯಾದ ಸ್ವರ್ಗವನ್ನು ಆಕ್ರಮಿಸಿದ್ದಾನೆ; ನಮ್ಮ ಜನರನ್ನು ಹೆದರಿಸುತ್ತಿದ್ದಾನೆ.
ಇಂದ್ರ ಮುಂದೆ ಬಂದು -
ಅವನನ್ನು ಸಂತೋಷ ಪಡಿಸಲು ಏನೇನೋ ಮಾಡಿದೆ; ಕಪ್ಪ ಕಾಣಿಕೆಗಳನ್ನೂ ಕೊಟ್ಟೆ.
ಬೃಹಸ್ಪತಿ ಹೇಳಿದ -
ಅವನನ್ನು ತೃಪ್ತಿಪಡಿಸಲು ಯತ್ನಿಸಿದಷ್ಟೂ ಅವನ ಪೀಡೆ ಹೆಚ್ಚಾಯಿತು.


ವನ್ನು ನಮ್ಮ ಸುಂದರ ಉದ್ಯಾನ-
ಳನ್ನೆಲ್ಲ ಹಾಳುಗೆಡವಿದ. ಅವನು
ದ್ರಿಸುವಾಗ, ಬಂಧಿತರಾದ ನಮ್ಮ
ಯರು ಅವನ ಬಳಿ ನಿಂತು,
ಕಣ್ಣೀರಿಡುತ್ತ, ಬೀಸಣಿಗೆ
ಬೀಸಬೇಕಾದ ಪಾಡು ಬಂದಿದೆ.”
ಯಾವನಾದರೂ ಯೋಗ್ಯ ನಾಯಕನನ್ನು ನಮಗೆ ಒದಗಿಸಿ, ತಾರಕನ ಮೇಲೆ ಏರಿ ಹೋಗಲು ನಮಗೆ ನೀನು ನೆರವಾಗಬೇಕು.
ಹ್ಮನಿಗೆ ಏನೂ ತೋಚಲಿಲ್ಲ.
ಮಕ್ಕಳೇ, ಿಮಗೆ ಸಹಾಯ ಮಾಡಬೇಕೆಂಬ ಹಂಬಲವಾದರೂ, ದು ನನ್ನಿಂದಾಗದ ಕೆಲಸ.
ನಾನೇ ಒಂದು ದಿನ ಕೊಟ್ಟ ವರದಿಂದಾಗಿ ತಾರಕ ಇಷ್ಟೊಂದು ಬಲಿಷ್ಠನಾಗಿದ್ದಾನೆ. ಅವನ ನಾಶದ ಕೆಲಸ ನನ್ನಿಂದಾಗದು.


ಆದರೆ ಆತ ಒಂದು ಉಪಾಯ ಸೂಚಿಸಿದ.
ಶಿವನಿಗೆ ಪಾರ್ವತಿಯೊಡನೆ ವಿವಾಹವಾಗುವ ಯೋಗವಿದೆ.
ನೀವು ಹೋಗಿ, ಆಕೆಯ ಚೆಲುವು ಅವನ ಮನಸ್ಸನ್ನು ಸೆಳೆವಂತೆ ಮಾಡಿ.
ಮತ್ತೂ ಬ್ರಹ್ಮನು ಹೇಳಿದ -
ಅವರು ವಿವಾಹವಾಗುತ್ತಲೇ ಅವರಿಗೆ ಹುಟ್ಟುವ ಮಗನು ನಿಮ್ಮ ದಂಡನಾಯಕನಾಗಿ ತಾರಕನನ್ನು ವಧಿಸುವನು.
ಅಲ್ಲಿಂದ ಇಂದ್ರ ನೇರವಾಗಿ ಕಾಮದೇವನಲ್ಲಿಗೆ ಧಾವಿಸಿದ.
ದೊರೆಯೆ ನನ್ನಿಂದ ಏನಾಗಬೇ ಹೇಳು.


ನ ಮೇಲೆ ನೀನು
ಾವ ಬೀರಿ ಅವನು
ಾರ್ವತಿಯನ್ನು
ರಿಸುವಂತಾಗಬೇಕು.
ಆಗಲಂತೆ!


ರತಿ, ಬೇಗನೆ ಬಾ;
ನೀನು ವಸಂತ ರಾಣಿ!
ಪ್ರಾಣಕಾಂತೆ,
ನನ್ನ ಜತೆಗೆ ಬಾ ;
ನಾವು ಶಿವನ
ತಪೋವನಕ್ಕೆ
ಹೋಗೋಣ


ತಪೋವನ ಸಮೀಪಿಸುತ್ತಲೇ
ಮದೇವನಿಗೆ ಆ ಮಹಾಬಲಿಷ್ಠ
ಶಿವನ ದರ್ಶನವಾಯಿತು.
ನನ್ನ
ಎದೆ
ತಲ್ಲಣಿಸುತ್ತಿದೆ!


ಅದೇ ವೇಳೆಗೆ ಪಾರ್ವತಿ ಆ ದಿಕ್ಕಿನಿಂದ
ಹಾದು ಹೋದಳು; ಕಾಮದೇವನಿಗೆ
ಧೈರ್ಯ ಬಂದಿತು.
ಇಂಥ ಸುಂದರಿ ಸಹಾಯ
ಕ್ಕೆ ಇರುತ್ತ ನನಗೆ
ಸೋಲು ಬರ-
ಲಾರದು.


ಪಾರ್ವತಿ ಶಿವನನ್ನು ವಂದಿಸಿ ಅವನ ಚರಣದ ಬಳಿಯಲ್ಲಿ ಹೂವುಗಳನ್ನಿರಿಸಿದಳು. ಆಗಷ್ಟೇ ಶಿವ ತನ್ನ ತಪಸ್ಸಿನಿಂದ ಎಚ್ಚೆತ್ತಿದ್ದ.
ನಿನ್ನನ್ನು ಅಖಂಡ-ವಾಗಿ ಪ್ರೀತಿಸುವ ಒಬ್ಬ ಯೋಗ್ಯ ವರನು ನಿನಗೆ ಸಿಗುವಂತಾಗಲಿ.
ಆತನ ಮಾತು ಸುಳ್ಳಾಗದು! ನನ್ನ ಆನಂದಕ್ಕೆ ಎಣೆಯಿಲ್ಲ.
ಪಾರ್ವತಿ, ತಾನು ತಂದ ಕಮಲಗಳ ಮಾಲೆಯೊಂದನ್ನು ಶಿವನ ಕೊರಳಿಗೆ ಹಾಕುವುದರಲ್ಲಿದ್ದಳು... ಆ ವೇಳೆಗೆ -
ಹಾ! ಇದೇ ಸುಸಮಯ!
ಆತನ ಬಾಣ ಗುರಿಯನ್ನು ಸೇರಿತು.
ನನ್ನ ಸೇವೆ ಮಾಡುತ್ತಿರುವ ಈಕೆ ಎಷ್ಟೊಂದು ಚೆಲುವೆ! ಅಂಥ ಅರಿವು ಈ ಮೊದಲೇ ಏಕೆ ನನ್ನಲ್ಲಿ ಉಂಟಾಗ-ಲಿಲ್ಲ?
ಆತ ನನ್ನನ್ನು ನೋ ತೊಡಗಿದರೆ ನನ್ನ ಲಜ್ಜೆ ಕಲೆಯುತ್ತಿ ವುದಾದರೂ ಏ ನನಗೆ ಏನೋ ಆಗುತ್ತಿ


ನು ಬಲು ಪ್ರಯಾಸದಿಂದ ತನ್ನ ನಸ್ಸನ್ನು ಸ್ವಾಧೀನ ತಂದುಕೊಂಡು ತ್ತಲೂ ನೋಡಿದ.
ನನ್ನ ಆತ್ಮ ಶಾಂತಿಯನ್ನು ಕದಡುತ್ತಿರುವವರು ಯಾರು?
ಆತ ಕಾಮನನ್ನು ನೋಡುತ್ತಲೇ ಅವನನ್ನು ಕೋಪ ಆವರಿಸಿತು.
ಅವನ ದೃಷ್ಟಿಮಾತ್ರದಿಂದ ಾಮ ಸುಟ್ಟು ಭಸ್ಮವಾದ.
ಶಿವನ ಕಡೆಗೆ ಕಣ್ಣು ಹಾಯಿಸಿದ್ದೇ ತಡ, ರತಿಗೆ ಮೂರ್ಛೆ ಬಂದಿತು.
ನು ಪಾರ್ವತಿಯನ್ನು ಒಂದಿಷ್ಟೂ ೋಡದೆ, ಅಲ್ಲಿಂದ ಹೊರಟೇ ಹೋದ.
ಪಾರ್ವತಿಯಲ್ಲಿ ನಾಚಿಕೆ, ದುಃಖ- ಗಳೆರಡೂ ಒತ್ತರಿಸಿ ಬಂದುವು.
ನನ್ನೆಲ್ಲ ಪ್ರೀತಿಯೂ ವ್ಯರ್ಥವಾಯಿತು. ನನ್ನ ಸಖಿಯರ ಇದಿರಿನಲ್ಲೇ ನನ್ನ ಇನಿಯನು ನನ್ನನ್ನು ನಿರಾಕರಿಸಿ ಹೋಗಿಬಿಟ್ಟ.



ಅಲ್ಲಿಗೆ ಹಿಮವಂತ ಧಾವಿಸಿದ; ಪಾರ್ವತಿ ಅವ-
ನನ್ನು ತಬ್ಬಿಕೊಂಡಳು. ಆತ ಅವಳನ್ನು ಸಂತೈಸಿದ.
ಅಯ್ಯೋ, ಮಗು!
ಅಪ್ಪಾ!
ದುಃಖಿತರಾದ ಅವರು ಮನೆಯ
ಕಡೆಗೆ ನಿಧಾನವಾಗಿ ಹೊರಟರು
ಆ ವೇಳೆಗೆ ರತಿ ಮೂರ್ಛೆಯಿಂದ
ಎಚ್ಚೆತ್ತಳು.
ಕಾಮನನ್ನು ಕಳೆದು-
ಕೊಂಡು ನಾನು
ಬದುಕಿರುವುದಾದರೂ
ಏತಕ್ಕೆ ? ನಾನೂ
ಅವನ ಜತೆಯಲ್ಲಿ
ಸತ್ತಿದ್ದರೆ
ಲೇಸಿತ್ತು.
ಆಗೊಂದು ಆಕಾಶವಾಣಿ ಕೇಳಿಸಿತು
ಚಿಂತಿಸಬೇಡ ಅನಾಥೆ; ಪಾರ್ವತಿ
ತನ್ನ ತಪೋಬಲದಿಂದ ಶಿವನನ್ನು
ಒಲಿಸಿಯೇ ಒಲಿಸುವಳು. ಅವರ
ವಿವಾಹದ ದಿನ, ತಿರುಗಿ ನಿನ್ನ
ಪತಿ ನಿನಗೆ ದೊರೆಯುತ್ತಾನೆ.
ಆಗ ರತಿಗೆ ಸಮಾಧಾನವಾಯಿತು.
ಅವಳು ಕಾಮನ ನಿರೀಕ್ಷಣೆಯಲ್ಲಿ
ಕಳೆಯತೊಡಗಿದಳು.


ರ್ವತಿಗೆ ಶಿವನ ವರ್ತನೆಯಿಂದ ಆದ
ವು ಅಷ್ಟೊಟಷ್ಟಲ್ಲ. ಆದರೂ ಅವನ
ಲೆ ಆಕೆಗಿದ್ದ ಪ್ರೀತಿ ತಗ್ಗಲಿಲ್ಲ.
ವು
ನನ್ನು
ಸ-
ಯಿತು.
ಆದರೂ ನಿರಾಶಳಾಗೆ. ಆತ ನನ್ನ ಚೆಲುವನ್ನು ಮೆಚ್ಚದೆ ಹೋಗ-ಬಹುದು; ಆದರೆ ನನ್ನ ತಪಸ್ಸಿಗೂ, ಭಕ್ತಿಗೂ ಒಲಿಯದೆ ಹೋಗಲಾರ.
ತನ್ನ ಈ ನಿರ್ಧಾರ-
ತಾಯಿಗೆ ತಿಳಿಸಿದಳು.
ಯಾಕಮ್ಮ ಅಷ್ಟೊಟಲ್ಲ? ನಿನ್ನನ್ನು ಪ್ರೀತಿಸಬಲ್ಲ ದೇವತೆಗಳಾರೂ ಇಲ್ಲವೇನು? ಅವನನ್ನು ಮರೆತುಬಿಡು.
ಅಮ್ಮ, ನಿನಗೆ ನನ್ನ ಮನಸ್ಸು ತಿಳಿಯದು. ನಾನು ನಿರ್ಧರಿಸಿದಂತೆಯೇ ಮಾಡುವವಳು. ನನ್ನನ್ನು ಹರಸು.
ನಕೆ ತಲೆಯನ್ನು ಅಲ್ಲಾಡಿಸುತ್ತ ಹರಸಿದಳು.
ಪಾರ್ವತಿ ಬಳಿಕ ಹಿಮವಂತನಲ್ಲಿಗೆ ಹೋದಳು.
ಅಪ್ಪಾ, ನಾನು ತಪೋವನಕ್ಕೆ ಹೋಗಿ ನನ್ನ ಮಿಕ್ಕ ಆಯುಷ್ಯವನ್ನು ತಪಸ್ಸು, ಪ್ರಾರ್ಥನೆಗಳಲ್ಲಿ ಕಳೆಯುವವಳು. ನನಗೆ ನಿನ್ನ ಹರಕೆ ಇರಲಿ.
ನಿನಗೆ ಒಳ್ಳೆತಾಗಲಿ, ಮುದ್ದಿಂ ಮಗಳೇ.


ಪಾರ್ವತಿ ತನ್ನ ಆಭರಣಗಳನ್ನೆಲ್ಲ ಕಳಚಿ-
ಬಿಟ್ಟು, ಅವಳ ತಂದೆ ಕೊಟ್ಟ ವನವನ್ನು
ಪ್ರವೇಶಿಸಿದಳು.
ಆ ಬನದ ಹರಿಣಗಳಿಗೆ ಅವಳೆಂ
ತುಂಬ ಪ್ರೀತಿ.
ಆಕೆ ಆಹಾರವನ್ನು ಕಡಿಮೆ ಮಾಡಿದಳು;
ಬರಿಯ ನೆಲದ ಮೇಲೆ ಪವಡಿಸಿದಳು.
ನಿನಗೆ ನನ್ನ ಪ್ರೀತಿಯ ಆಳ ತಿಳಿಯದೇ? ಇಲ್ಲ, ಎಂದೂ ಹಾಗಿರದು. ಪ್ರಾಯಶಃ ನನ್ನನ್ನು ಪರೀಕ್ಷಿಸಲು ಹವಣಿಸುತ್ತಿದ್ದೀಯ.
ಆಕೆ ತಪೋನಿರತಳಾದಾಗ
ಸಮೀಪದ ಮುನಿ ಜನರು
ಅವಳನ್ನು ಕಾಣಲು ಬಂದರ
ಅವರಿಗೆಲ್ಲ ಅಚ್ಚರಿ!



ಣ ಆಕೆ ತಿನ್ನುವುದನ್ನೇ ನಿಲ್ಲಿಸಿದಳು.
ಕಾರವನ್ನು ಟ್ಟದೇ ವು ರಗಳೇ ದಿವೆ.
ಆಕೆ ಅಪರ್ಣೆ!
ನಿರಂತರ ಉಪವಾಸ ಮಾಡುವ ಸ್ತ್ರೀ.
ನಿನ್ನ ನಾಮವನ್ನು ತುಟಿಗಳಿಂದ ನುಡಿಯುತ್ತ ಜೀವಿಸುವೆನು.
ಕೆ ಚಳಿ ನೀರಿನ ಕೊಳ- ಬಂದರಲ್ಲಿ ಕುಳಿತು, ನಡು- ವ ತುಟಿಗಳಿಂದ ತನ್ನ ನುವನ್ನು ಧ್ಯಾನಿಸತೊಡಗಿದಳು
ಅಬ್ಬಾ, ಇವಳು ವಿರಕ್ತರಲ್ಲಿ ವಿರಕ್ತೆ!
ನನ್ನ ಹೃದಯ- ವನ್ನು ತುಂಬಿ- ಕೊಂಡಿರುವ ನಿನ್ನ ಬಿಂಬವೇ ನನಗೆ ಶಾಕವನ್ನು ಕೊಟ್ಟಿತು.
ಅನೇಕ ವರ್ಷಗಳು ಉರುಳಿದವು; ಆದರೆ ಪಾರ್ವತಿ ನಿರಾಶಳಾಗಲಿಲ್ಲ.
ಂದು ದಿನ ಆಕೆ ನಿತ್ಯದಂತೆ ಕೊಳದಲ್ಲಿ ನಕ್ಕೆ ಕುಳಿತುಕೊಳ್ಳಲು ಸಿದ್ಧಳಾಗುತ್ತಿ- ಗ ಒಬ್ಬ ತರುಣ ಯತಿ ಆ ಕಡೆಗೆ ಬಂದ. ರ್ವತಿ ಅವನನ್ನು ಕಂಡು ನಮಿಸಿದಳು.
?
ನಿನ್ನ ಕೋಮಲ ಶರೀರವು ನಿನ್ನ ಕಠಿಣ ನಿರ್ಧಾರ- ವನ್ನು ಪಾಲಿಸಲು ಹೇಗೆ ಶಕ್ಯವಾಗ- ಬಲ್ಲದು!


ಪಾರ್ವತಿಯ ಅಷ್ಟೆಲ್ಲ ತಪಸ್ಸು ಅವಳ ಚೆಲುವನ್ನು ಹೆಚ್ಚಿಸಿತ್ತೇ ಹೊರತು ಕುಗ್ಗಿಸಿರಲಿಲ್ಲ.
ಶುಚಿ ಎಂಬುದು ಚೆಲುವಿನ ಹಗೆಯಲ್ಲ; ಚೆಲುವು ಶುಚಿಯ ಹಗೆಯಲ್ಲ- ಎನ್ನಲು ನೀನೇ ಸಾಕ್ಷಿ!
ನಿನ್ನೀ ಸಾಹಸದಿಂದ ನಿನ್ನ ತಂದೆಗೆ ಮತ್ತಷ್ಟು ಶ್ರೇಯಸ್ಸು ಪ್ರಾಪ್ತವಾಗಿದೆ!
ಓ ತರುಣೀಮಣಿ, ನಿನ್ನೀ ಘೋರ ತಪಸ್ಸಿಗೆ ಕಾರಣವಾದರೂ ಏನು?
ಸಾಮಾನ್ಯವಾಗಿ ಸಂಸಾರದಲ್ಲಿ ನೊಂದು ಕಂಗಾಲಾದವರೇ ಸನ್ಯಾಸ ಹಿಡಿಯುವುದು.


ರೆ ನಿರ್ದೋಷಿಯಾದ
ಸು, ಎಲ್ಲರ ಅಭಿಮಾನಕ್ಕೂ
ತ್ರಳಾದವಳು, ಹೀಗೆ
ಮಾಡುತ್ತಿರುವುದರ
ಅರ್ಥ?
ಾತನ್ನು ಕೇಳಿ ಪಾರ್ವತಿ ನಿಟ್ಟುಸಿರು ಬಿಟ್ಟಳು.
ಇಷ್ಟೆಲ್ಲ, ಪ್ರೇಮಕ್ಕೆ
ತಕ್ಕ ಪುರಸ್ಕಾರ
ಸಿಗಲಿಲ್ಲವೆಂದೇ!
ಇರಲಾರದು. ನಿನ್ನಂಥ
ರತ್ನವನ್ನು ಎಲ್ಲರೂ
ಅರಸಿ ಬಂದಾರು.
ಆ ರತ್ನ
ತಾನಾಗಿಯೇ
ಅರಸಿಕೊಂಡು
ಹೋಗಬೇಕಿಲ್ಲ.
ಂದರಿ, ನಿನ್ನ ಮನೆಗೆ
ಳು. ಈ ತಪಸ್ಸನ್ನು
ಸಿದೆಯಾದರೆ ನಾನು
ಸಿದ ಪುಣ್ಯದ ಅರ್ಧಾಂಶ-
ವನ್ನು ನಿನಗೆ ಕೊಡುವೆನು.
ದರೆ- ಇಷ್ಟೆಲ್ಲ ಏಕೆ-
ಎಂದಾದರೂ
ತಿಳಿಸು.
ಪಾರ್ವತಿ ತನ್ನ ಗೆಳತಿಯ
ಸಹಾಯವನ್ನು ನಿರೀಕ್ಷಿಸಿದಳು.



ಅವಳು ಎಲ್ಲವನ್ನೂ ವಿವರಿಸಿದಳು.
ಆಕೆ ಶಿವನ ಪ್ರೀತಿಯನ್ನು ಗಳಿಸಲು ಹೊರಟಿದ್ದಳು. ಅವಳ ಸೌಂದರ್ಯಕ್ಕೆ ಅದು ಸಾಧ್ಯವಾಗಲಿಲ್ಲ. ಈಗ ತಪೋಬಲದಿಂದ, ವಿರಕ್ತಿಯಿಂದ- ಅವನನ್ನು ಒಲಿಸಲು ಹೊರಟಿದ್ದಾಳೆ.
ಅವಳು ಅವನ ಸಲುವಾಗಿ ಎಷ್ಟು ರೋದಿಸಿದಳೆಂದಿಲ್ಲ, ಆದರೆ ಆ ಶಿವನ ಕಿವಿ ಎಲ್ಲಕ್ಕೂ ಕಿವುಡಾಗಿತ್ತು.
ಯತಿಯು ಪಾರ್ವತಿಯನ್ನು ನೋಡುತ್ತ-
ಇದು ಸತ್ಯ ಸಂಗತಿಯೇ ? ಅಥವಾ ಪರಿಹಾಸವೇ ?
ಯತಿ ವರ, ಇದು ನಿಜ! ನನಗೆ ಶಿವನೆಂದರೆ ಬಲು ಮೆಚ್ಚು. ಅವನನ್ನು ಭಕ್ತಿ, ತಪಸ್ಸುಗಳಿಂದ ಒಲಿಸಲು ಹೊರಟಿದ್ದೇನೆ.


ಹೋ, ನನಗೆ ಶಿವನ
ತಿಯು ಚೆನ್ನಾಗಿದೆ.
ಬೂದಿ ಬಡಕ;
ಭೂಷಣ;
ಲಸು ಚರ್ಮವನ್ನು
ಟ್ಟು ತಿರುಗುವವ.
ನಿನ್ನಂಥ
ಸುಕೋಮಲೆ
ಅವನ
ವಧುವಾಗುವುದೇ?
ಸಲ್ಲದ ಮಾತು.
ಆತ ದರಿದ್ರ, ಕುರೂಪಿ;
ಅವನ ಕುಲಗೋತ್ರ
ಯಾರಿಗೂ
ತಿಳಿಯದು.
, ಅವನು ನಿನಗೆ
ದೂ ತಕ್ಕವನಲ್ಲ;
ನನ್ನು ಮರೆತು,
ನ್ಯವನಾದರೂ
ಯೋಗ್ಯನನ್ನು
ರಿಸು.
ಮುಚ್ಚು
ಬಾಯಿ!
ಪಾರ್ವತಿಗೆ ಸಿಟ್ಟನ್ನು
ತಡೆಯುವುದಕ್ಕಾಗಲಿಲ್ಲ.
ಒಂದು
ಪರಿಶುದ್ಧಾತ್ಮವನ್ನು
ಇನ್ನೊಂದು
ಪರಿಶುದ್ಧಾತ್ಮವೇ
ತಿಳಿದುಕೊಳ್ಳ
ಬಲ್ಲುದು.


ಅಲ್ಪನಿಗೆ ಮಹಾನುಭಾವರ ಅರಿವಾಗಲು ಶಕ್ಯವಿಲ್ಲ. ನಿನ್ನ ನಾಲಿಗೆ ನಿನ್ನ ಕೀಳು ಬುದ್ಧಿಯನ್ನು ಪ್ರಕಟ ಪಡಿಸುತ್ತಿದೆ.
ಶಿವನಿಗೆ ಹೊರಗಣ ತೋರಿಕೆಯೂ ಇಲ್ಲ. ತೋರಿಕೆಯ ಜಗತ್ತೂ ಅವನಿಗೆ ಒಗ್ಗುವುದೂ ಇಲ್ಲ. ಅವನ ಮಾನದಂಡವೇ ಬೇರೆ!
ಅತಿ ದರಿದ್ರನಾದರೇನಂತೆ? ಚಿಂದಿ ಉಟ್ಟರೇನಂತೆ? ಸರ್ಪಭೂಷಣನಾದರೇನಂತೆ! ಅವನೇ ನನ್ನ ನಾಥ!
ಅವನಲ್ಲಿ ಅನೇಕ ದೋಷಗಳಿರಬಹು ಗುಣಗಳು ಕಡಿ ಇರಬಹುದು. ಆದರ ಅವನೇ ನನ್ನ ಪ್ರೀತಿಪಾತ್ರ.



ರ್ವತಿ ತನ್ನ ವಿಸ್ಮಿತ ಗೆಳತಿಯನ್ನು ನೋಡಿ ನುಡಿದಳು -
ಗೆಳತಿ, ಆತನಿಗೆ ಹೊರಟು ಹೋಗಲು ಹೇಳು. ಆತ ಈ ತೆರನ ಅಪನುಡಿಗಳಿಂದ ತನ್ನ ಹೃದಯವನ್ನೇ ಕೆಡಿಸಿಕೊಂಡಿದ್ದಾನೆ.
ಛೀ, ನಾನು ಇಲ್ಲಿರುವುದೇ ಸರಿಯಲ್ಲ. ಕೆಟ್ಟ ಮಾತುಗಳನ್ನು ಆಡುವುದೂ ತಪ್ಪು; ಕೇಳುತ್ತಿರುವುದೂ ತಪ್ಪು. ಬಾ, ಹೋಗುವ.
ರ್ವತಿ ಸಿಟ್ಟಿನಿಂದ ಗದಿರುವಿ ಹೊರಟಾಗ-
-ಆ ಯತಿ ಧಾವಿಸಿ ಅವಳ ದಾರಿಗೆ ಅಡ್ಡಬಂದ.


ಪಾರ್ವತಿಗೆ ಬೆಕ್ಕಸ ಬೆರಗು!
ಆ ಯತಿ ಅವಳ ಪ್ರೀತಿಯ ಶಿವನಲ್ಲದೆ
ಬೇರೊಬ್ಬನಾಗಿರಲಿಲ್ಲ.
ಓ, ಕೋಮಲಾಂಗಿ, ನಿನ್ನ ತಪಸ್ಸು, ಭಕ್ತಿಗಳೆಲ್ಲ ನನ್ನನ್ನು ಗೆದ್ದಿವೆ. ನಿನಗೆ ತಲೆವಾಗುತ್ತಿದ್ದೇನೆ ನಾನು.
ಆದರೆ ಕರ್ತವ್ಯ ಮರೆಯಲಾರದ
ಸರಿದು, ಗೆಳತಿಯ ಬಳಿಗೆ ಹೋದ
ಆತನಿಗೆ ಹೇಳು - ನನ್ನ ಕೈ ಹಿಡಿಯುವ ಆಸೆಯಿದ್ದರೆ ತಂದೆಯನ್ನು ಹೋಗಿ ಕೇಳಲಿ.


ಅದೇ ರೀತಿ ತಿಳಿಸಿದಳು.
ಬಳಿಕ ಶಿವನಲ್ಲಿಗೆ ಬಂದಳು.
ಪ್ರಿಯೇ, ಬೇಗನೆ ಅಷ್ಟು ಕೆಲಸ ಮಾಡುತ್ತೇನೆ.
ಈ ಭರವಸೆಯನ್ನು ಪಡೆದ ಪಾರ್ವತಿ ಗೆಳತಿಯೊಡನೆ ಮನೆ ಸೇರಿದಳು.
ಸಪ್ತ ಋಷಿಗಳನ್ನು ಕರೆಯಿಸಿಕೊಂಡ.
ನನ್ನ ಮಗನು ತಾರಕಾಸುರನ ಮೇಲೆ ದಂಡೆತ್ತಿ ಹೋಗುವನೆಂಬ ಭರವಸೆಯನ್ನು ಬ್ರಹ್ಮದೇವನು ದೇವತೆಗಳಿಗೆ ಕೊಟ್ಟಿದ್ದ.
ಆ ಮಾತನ್ನು ಉಳಿಸುವ ಸಲುವಾಗಿ ನಾನು ಪಾರ್ವತಿಯನ್ನು ವಿವಾಹವಾಗುತ್ತೇನೆ. ಹಿಮವಂತನಲ್ಲಿಗೆ ಹೋಗಿ- ಅವಳ ಹಸ್ತವನ್ನು ನಾನು ಬಯಸಿದ್ದೇನೆ ಎಂದು ತಿಳಿಸಿ.


ಹಿಮವಂತನಿಗೆ ಸಂತೋಷವಾಗದಿದ್ದೀತೇ?


ವಿವಾಹವೂ ಜರುಗಿತು.


ವಿವಾಹ ಸಮಾರಂಭ ಮುಗಿಯುತ್ತಲೇ ದೇವತೆಗಳು ಶಿವನ ಬಳಿಗೆ ಬಂದರು.
ನೀನು ರತಿದೇವಿಯ ಸಲುವಾಗಿ ಕಾಮನನ್ನು ಬದುಕಿಸಬೇಕು. ಪಾರ್ವತಿಯ ಸಲುವಾಗಿ ಆದರೂ ದುಃಖಿನಿಯಾದ ರತಿದೇವಿಯ ಮತ್ತು ಅವಳ ಪತಿಯ ಮೇಲೆ ದಯೆದೋರು.
ಆಗಲಂತೆ! ಆದರೆ ನಾನು ಸಹ, ಈಗ ಕಾಮನ ದಾಸ-ನಾದಂತಲ್ಲವೇ?


ಎಷ್ಟೋಟ್ಟೋ ವರ್ಷಗಳು ಕಳೆದುವು. ಶಿವನು ಮಡದಿಯ ಮೋಹ-ದಲ್ಲಿ ಎಲ್ಲವನ್ನೂ ಮರೆತಿದ್ದ.
ಆದ್ದರಿಂದ ಇಂದ್ರ ಅಗ್ನಿಯನ್ನು ಕಳುಹಿಸಿದ.
ನಮಗೆ ಬಂದ ಆಪತ್ತಿನ ನೆನಪನ್ನು ನಿನಗೆ ಹುಟ್ಟಿಸಲು ಬಂದೆ.
ವನು ಅಗ್ನಿಯ ಹಸ್ತದಲ್ಲಿ ಂದು ಬೀಜವನ್ನಿರಿಸಿದ.
ಈ ಬೀಜ ಬಲಿಯುತ್ತಲೇ ಒಂದು ಶಿಶು ಹೊರಬೀಳುವುದು. ಆತನೇ ನಿಮ್ಮ ದಂಡನಾಯಕ ಆಗುತ್ತಾನೆ.
ಅಗ್ನಿ ಆ ಬೀಜವನ್ನು ಹಿಡಿದುಕೊಂಡರೆ, ಅದು ಅವನ ಕೈಯನ್ನೇ ಸುಡತೊಡಗಿತು!
ನಾನು ಇಂದ್ರನ ಬಳಿಗೆ ಧಾವಿಸ-ಬೇಕೀಗ.


ಆತ ಇಂದ್ರನಲ್ಲಿಗೆ ಹೋಗಿ ಸೇರುವುದರೊಳಗೆ, ಸಂಕಟದಿಂದ ಆತನ ಮುಖ ಪೆಚ್ಚುಗಟ್ಟಿತ್ತು.
ಬೀಜ ಇನ್ನೂ ಕೈಯಲ್ಲೇ ಇದೆ; ಆದರೆ ಈ ಕಷ್ಟ ಸಹಿಸ-ಲಾರೆ.
ಇಂದ್ರನಿಗೆ ತುಂಬ
ಅದನ್ನು ನೀನು ಗಂಗೆಗೆ ಒಯ್ದು ಕೊಡು, ಆಗ ನಿನಗೂ ತಂಪಾದೀತು; ಅದಕ್ಕೂ ರಕ್ಷಣೆ ಸಿಕ್ಕೀತು.
ಅಗ್ನಿಯು ಗಂಗೆಯಿದ್ದಲ್ಲಿಗೆ ಹೋಗಿ ಬೀಜವನ್ನು ಹಿಡಿದುಕೊಂಡೇ ತಣ್ಣೀರಲ್ಲಿ ಮುಳುಗಿದ. ಆಗ ಯಾವತ್ತೂ ನೀರು ಕುದಿದು, ಉಕ್ಕಿತು. ಕೈಯಲ್ಲಿದ್ದ ಬೀಜ ತಳದಡಕ್ಕೆ ಸಿಡಿದುಬಿದ್ದಿತು.
ಅದೇ ವೇಳೆಗೆ ಆರು ಮಂದಿ ಅಪ್ಸರೆಯರು ಗಂಗಾ ಸ್ನಾನಕ್ಕಾಗಿ ಅಲ್ಲಿಗೆ ಬಂದರು.
ಇದೇನು? ಬೀಜವೇ?
ಅದನ್ನು ಒಂದು ಶರ-ಹುಲ್ಲುಗೂಡಿನಲ್ಲಿ ಇಡೋಣ.
ಅವರು ಅದನ್ನು